ಈ ಪ್ರಶ್ನೆಪುಸ್ತಕವನ್ನು ತೆರೆಯುವಂತೆ ನಿಮಗೆ ತಿಳಿಸುವವರೆಗೂ ಇದನ್ನು ತೆರೆಯಕೂಡದು

ಪ್ರಶ್ನೆಪತ್ರಿಕೆ ಬಾರ್‌ಕೋಡ್

**C**

**2023**

**8750603**

# ಪ್ರಶ್ನೆಪುಸ್ತಿಕೆ

# ಸಾಮಾನ್ಯ ಪತ್ರಿಕೆ (ಪತ್ರಿಕೆ—1)

**ವಿಷಯ ಸಂಕೇತ : 541**

**ಗರಿಷ್ಠ ಸಮಯ : 1½ ಗಂಟೆಗಳು** **ಗರಿಷ್ಠ ಅಂಕಗಳು : 300**

## ಸೂಚನೆಗಳು

1. ಪರೀಕ್ಷೆ ಪ್ರಾರಂಭವಾದ ಕೂಡಲೇ ನಿಮ್ಮ ಪ್ರಶ್ನೆಪತ್ರಿಕೆಯಲ್ಲಿ ಮುದ್ರಿತವಾಗದ ಅಥವಾ ಹರಿದಿರುವ ಅಥವಾ ಬಿಟ್ಟು ಹೋಗಿರುವ ಪುಟಗಳು ಅಥವಾ ಪ್ರಶ್ನೆಗಳು ಇತ್ಯಾದಿ ಕಂಡುಬಂದಲ್ಲಿ ನಿಮ್ಮ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಅದೇ ಶ್ರೇಣಿಯ ಪೂರ್ಣ ಪ್ರಶ್ನೆಪತ್ರಿಕೆಯೊಂದಿಗೆ ಬದಲಾಯಿಸಿಕೊಳ್ಳತಕ್ಕದ್ದು. ಒಂದು ವೇಳೆ ಅಭ್ಯರ್ಥಿಯು ಪ್ರಶ್ನೆಪತ್ರಿಕೆಯಲ್ಲಿನ ಪುಟಗಳನ್ನು ಸರಿಯಾಗಿ ಪರಿಶೀಲಿಸದೇ ದೋಷಪೂರಿತ ಪ್ರಶ್ನೆಪತ್ರಿಕೆಯನ್ನೇ ಉಪಯೋಗಿಸಿದಲ್ಲಿ ಇದಕ್ಕೆ ಅಭ್ಯರ್ಥಿಯೇ ಹೊಣೆಗಾರರಾಗಿರುತ್ತಾರೆ.
2. ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮತ್ತು ಪ್ರವೇಶ ಪತ್ರದಲ್ಲಿ ನೀಡಿರುವ ಸೂಚನೆಗಳನ್ನು ಎಚ್ಚರಿಕೆಯಿಂದ ಓದಿಕೊಳ್ಳತಕ್ಕದ್ದು. ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ ಆಯೋಗವು ತೆಗೆದುಕೊಳ್ಳುವ ಶಿಸ್ತು ಕ್ರಮಕ್ಕೆ ಒಳಗಾಗಬೇಕಾಗುತ್ತದೆ.
3. ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ **ಪ್ರಶ್ನೆಪತ್ರಿಕೆಯ ಶ್ರೇಣಿ ಹಾಗೂ ನಿಮಗೆ ನೀಡಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯು ಒಂದೇ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ವ್ಯತ್ಯಾಸವಿದ್ದಲ್ಲಿ, ಒ.ಎಂ.ಆರ್. ಉತ್ತರ ಹಾಳೆಯಲ್ಲಿ ತಿಳಿಸಿರುವ ಅದೇ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನೇ ಸಂವೀಕ್ಷಕರಿಂದ ಪಡೆದುಕೊಳ್ಳತಕ್ಕದ್ದು.**
4. ಎಲ್ಲಾ ಪ್ರಶ್ನೆಗಳಿಗೂ ಸಮಾನ ಅಂಕಗಳು ಇರುತ್ತವೆ.
5. ಪಕ್ಕದಲ್ಲಿ ಒದಗಿಸಿರುವ ಚೌಕದಲ್ಲಿಯೇ ನಿಮ್ಮ ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಪ್ರಶ್ನೆ ಪತ್ರಿಕೆಯಲ್ಲಿ ಬೇರೆ ಎಲ್ಲಿಯೂ ಏನನ್ನೂ ಬರೆಯಬಾರದು.

**ನೋಂದಣಿ ಸಂಖ್ಯೆ**

6. ಈ ಪ್ರಶ್ನೆಪತ್ರಿಕೆಯು 100 ಪ್ರಶ್ನೆಗಳನ್ನು ಒಳಗೊಂಡಿರುತ್ತದೆ. ಪ್ರತಿಯೊಂದು ಪ್ರಶ್ನೆಯು 4 ಆಯ್ಕೆಗಳನ್ನು ಹೊಂದಿರುತ್ತದೆ. ನೀಡಿರುವ ಆಯ್ಕೆಗಳಲ್ಲಿ ಒಂದು ಸರಿಯಾದ ಉತ್ತರವನ್ನು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಗುರುತು ಮಾಡಿ. ಒಂದು ವೇಳೆ ಅಲ್ಲಿ ಒಂದಕ್ಕಿಂತ ಹೆಚ್ಚು ಸರಿಯಾದ ಉತ್ತರಗಳಿವೆಯೆಂದು ನೀವು ಭಾವಿಸಿದರೆ ನಿಮಗೆ ಅತ್ಯುತ್ತಮವೆನಿಸುವ ಉತ್ತರವನ್ನು ಗುರುತು ಮಾಡಿ. ಪ್ರತಿ ಪ್ರಶ್ನೆಗೆ ನೀವು ಕೇವಲ **'ಒಂದು ಉತ್ತರವನ್ನು ಮಾತ್ರ'** ಆಯ್ಕೆ ಮಾಡಬೇಕು. ಒಂದು ವೇಳೆ ಒಂದಕ್ಕಿಂತ ಹೆಚ್ಚಿನ ಉತ್ತರಗಳನ್ನು ಎನ್‌ಕೋಡ್ (ಗುರುತು) ಮಾಡಿದಲ್ಲಿ ಆ ಉತ್ತರಗಳನ್ನು **ಅಸಿಂಧುವೆಂದು** ಪರಿಗಣಿಸಲಾಗುವುದು.
7. ಪ್ರಶ್ನೆಗಳು ಕನ್ನಡ ಮತ್ತು ಆಂಗ್ಲ ಎರಡೂ ಭಾಷೆಗಳಲ್ಲಿರುತ್ತವೆ. ಕನ್ನಡ ಭಾಷೆಯಲ್ಲಿರುವ ಯಾವುದೇ ಪ್ರಶ್ನೆಗಳ ಭಾಷಾಂತರದಲ್ಲಿ ಏನಾದರೂ ಗೊಂದಲವಾದಲ್ಲಿ ಅಭ್ಯರ್ಥಿಗಳು ಆಂಗ್ಲ ಭಾಷೆಯಲ್ಲಿ ಪ್ರಶ್ನೆಗಳನ್ನು ಸಹ ನೋಡಿಕೊಂಡು, ಪ್ರಶ್ನೆಯನ್ನು ಅರ್ಥೈಸಿಕೊಳ್ಳುವುದು.
8. ಎಲ್ಲಾ ಉತ್ತರಗಳನ್ನು ನಿಮಗೆ ಒದಗಿಸಲಾಗಿರುವ ಪ್ರತ್ಯೇಕ ಒ.ಎಂ.ಆರ್. ಉತ್ತರ ಹಾಳೆಯ ಮೇಲೆ ಕೇವಲ **ಕಪ್ಪು ಶಾಯಿಯ ಬಾಲ್‌ಪಾಯಿಂಟ್ ಪೆನ್ನಿನಲ್ಲಿ** ಮಾತ್ರ ಗುರುತು ಮಾಡಬೇಕು.
9. **ಅಭ್ಯರ್ಥಿಯು ತಮ್ಮ personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿ ಹಾಗೂ ನಾಮಿನಲ್ ರೋಲ್‌ನ ತಮ್ಮ ಅಂಕಣದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆ ಶ್ರೇಣಿಯು ಒಂದೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಒಂದು ವೇಳೆ ವ್ಯತ್ಯಾಸ ಕಂಡುಬಂದಲ್ಲಿ ಅಭ್ಯರ್ಥಿಯು ಯಾವ ಶ್ರೇಣಿಯ ಪ್ರಶ್ನೆಪತ್ರಿಕೆಯನ್ನು ಉಪಯೋಗಿಸಿರುತ್ತಾರೆ ಎಂಬುದರ ಬಗ್ಗೆ ಮುಚ್ಚಳಿಕೆ ಪತ್ರವನ್ನು ನೀಡತಕ್ಕದ್ದು. ಇಲ್ಲದಿದ್ದಲ್ಲಿ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಶ್ರೇಣಿಯನ್ನೇ ಮೌಲ್ಯಮಾಪನಕ್ಕೆ ಪರಿಗಣಿಸಲಾಗುವುದು.**
10. ಒಂದು ವೇಳೆ ಅಭ್ಯರ್ಥಿಯು ಬೇರೊಬ್ಬ ಅಭ್ಯರ್ಥಿಯ personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ **ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
11. ಅಭ್ಯರ್ಥಿಯು ಒ.ಎಂ.ಆರ್. ಉತ್ತರ ಹಾಳೆಯಲ್ಲಿ ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡತಕ್ಕದ್ದು. ತಪ್ಪಿದಲ್ಲಿ **ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
12. ಅಭ್ಯರ್ಥಿಯು Non-personalized ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಉತ್ತರಿಸಿದ್ದಲ್ಲಿ ಅಭ್ಯರ್ಥಿಯು ನೋಂದಣಿ ಸಂಖ್ಯೆಯನ್ನು ಒದಗಿಸಿರುವ ಸ್ಥಳದಲ್ಲಿ ಬರೆದು ಸಂಬಂಧಪಟ್ಟ ವೃತ್ತವನ್ನು ತುಂಬಬೇಕು ಹಾಗೂ ತಮ್ಮ ಪ್ರಶ್ನೆಪತ್ರಿಕೆ ಶ್ರೇಣಿಯನ್ನು ಕಡ್ಡಾಯವಾಗಿ ಬರೆಯಬೇಕು ಮತ್ತು ನಿಗದಿಪಡಿಸಿದ ಸ್ಥಳದಲ್ಲಿ ಸಹಿ ಮಾಡಬೇಕು. ಇಲ್ಲದಿದ್ದಲ್ಲಿ, **ಅಂತಹ ಅಭ್ಯರ್ಥಿಯ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
13. ನಾಮಿನಲ್ ರೋಲ್ **(ಹಾಜರಾತಿ ಹಾಳೆ)**ನಲ್ಲಿ ಅಭ್ಯರ್ಥಿಯು ತಪ್ಪದೇ ಸಹಿ ಹಾಕತಕ್ಕದ್ದು.
14. ಅಭ್ಯರ್ಥಿಯು ಮೇಲ್ಕಂಡ ಯಾವುದೇ ಸೂಚನೆಗಳನ್ನು ಉಲ್ಲಂಘಿಸಿದಲ್ಲಿ **ಅಂತಹ ಒ.ಎಂ.ಆರ್. ಉತ್ತರ ಹಾಳೆಯನ್ನು ಅಸಿಂಧುವೆಂದು ಪರಿಗಣಿಸಲಾಗುವುದು.**
15. ಪರೀಕ್ಷೆಯ ಮುಕ್ತಾಯವನ್ನು ಸೂಚಿಸುವ ಅಂತಿಮ ಗಂಟೆ ಬಾರಿಸಿದ ತಕ್ಷಣವೇ ಒ.ಎಂ.ಆರ್. ಉತ್ತರ ಹಾಳೆಯಲ್ಲಿ ಇನ್ನಾವುದೇ ಗುರುತು ಮಾಡುವುದನ್ನು ನಿಲ್ಲಿಸಬೇಕು. ಸಂವೀಕ್ಷಕರು ಬಂದು ನಿಮ್ಮಲ್ಲಿರುವ ಒ.ಎಂ.ಆರ್. ಉತ್ತರ ಹಾಳೆಯನ್ನು ತಮ್ಮ ವಶಕ್ಕೆ ಪಡೆದುಕೊಂಡು ಲೆಕ್ಕಕ್ಕೆ ತೆಗೆದುಕೊಳ್ಳುವವರೆಗೂ ನಿಮ್ಮ ಆಸನದಲ್ಲಿಯೇ ಕುಳಿತಿರತಕ್ಕದ್ದು.
16. ಪರೀಕ್ಷೆ ಮುಗಿದ ನಂತರ ಸಂವೀಕ್ಷಕರಿಂದ ಹಿಂಪಡೆದ ಕಾರ್ಬನ್ ರಹಿತ ಒ.ಎಂ.ಆರ್. ಉತ್ತರ ಹಾಳೆಯ (candidate copy) ಪ್ರತಿಯನ್ನು ಅಂತಿಮ ಆಯ್ಕೆಪಟ್ಟಿಯನ್ನು ಪ್ರಕಟಿಸುವವರೆಗೆ ಜೋಪಾನವಾಗಿ ಸಂರಕ್ಷಿಸಿಟ್ಟುಕೊಳ್ಳಬೇಕು ಮತ್ತು ಆಯೋಗವು ಯಾವುದೇ ಸಂದರ್ಭದಲ್ಲಿ ಹಾಜರುಪಡಿಸಲು ಸೂಚಿಸಿದಲ್ಲಿ, ತಪ್ಪದೇ ಅದೇ ಪ್ರತಿಯನ್ನು ಹಾಜರುಪಡಿಸಬೇಕು.
17. ಚಿತ್ತು ಕೆಲಸಕ್ಕಾಗಿ ಹಾಳೆಗಳನ್ನು ಪ್ರಶ್ನೆಪತ್ರಿಕೆಯ ಕೊನೆಯಲ್ಲಿ ಸೇರಿಸಲಾಗಿದೆ. ಪ್ರಶ್ನೆಪತ್ರಿಕೆಯ ಇನ್ನುಳಿದ ಯಾವ ಭಾಗದಲ್ಲಿಯೂ ನೀವು ಯಾವುದೇ ರೀತಿಯ ಗುರುತನ್ನು ಮಾಡತಕ್ಕದ್ದಲ್ಲ.
18. **ತಪ್ಪು ಉತ್ತರಗಳಿಗೆ ವಿಧಿಸಲಾಗುವ ದಂಡ :**

    **ಅಭ್ಯರ್ಥಿಯಿಂದ ತಪ್ಪು ಗುರುತು ಮಾಡಲ್ಪಟ್ಟ ಉತ್ತರಕ್ಕೆ ದಂಡವನ್ನು ವಿಧಿಸಲಾಗುವುದು.**

    *(i)* ಪ್ರತಿ ಪ್ರಶ್ನೆಗೆ ಉತ್ತರಕ್ಕಾಗಿ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಪ್ರತಿ ಪ್ರಶ್ನೆಗೆ ಅಭ್ಯರ್ಥಿಯು ತಪ್ಪು ಉತ್ತರ ನೀಡಿದಲ್ಲಿ ಆ ಪ್ರಶ್ನೆಗೆ ನಿಗದಿಪಡಿಸಲಾದ ಅಂಕಗಳಲ್ಲಿ **¼ (0·25)** ರಷ್ಟು ಅಂಕಗಳನ್ನು ದಂಡದ ರೂಪದಲ್ಲಿ ಕಳೆಯಲಾಗುವುದು.

    *(ii)* ಅಭ್ಯರ್ಥಿಯು ಒಂದು ಪ್ರಶ್ನೆಗೆ ಒಂದಕ್ಕಿಂತ ಹೆಚ್ಚು ಉತ್ತರವನ್ನು ನೀಡಿದ್ದಲ್ಲಿ, ಅದರಲ್ಲಿ ಒಂದು ಉತ್ತರವು ಸರಿಯಾಗೇದ್ದರೂ ಸಹ ಅದನ್ನು ತಪ್ಪು ಉತ್ತರ ಎಂದು ಪರಿಗಣಿಸಲಾಗುವುದು. ಅಲ್ಲದೆ, ಮೇಲೆ ತಿಳಿಸಿದಂತೆಯೇ ಆ ಪ್ರಶ್ನೆಗೆ ದಂಡವನ್ನು ವಿಧಿಸಲಾಗುವುದು.

    *(iii)* ಅಭ್ಯರ್ಥಿಯು ಯಾವುದೇ ಪ್ರಶ್ನೆಗೆ ಉತ್ತರಿಸದೆ ಖಾಲಿ ಬಿಟ್ಟಲ್ಲಿ, ಅಂದರೆ ಉತ್ತರವನ್ನು ನೀಡದಿದ್ದಲ್ಲಿ, ಆ ಪ್ರಶ್ನೆಗೆ ಯಾವುದೇ **ದಂಡವನ್ನು ವಿಧಿಸಲಾಗುವುದಿಲ್ಲ.**

**ಯಾವುದೇ ರೀತಿಯ ಮೊಬೈಲ್ ಫೋನ್‌ಗಳು, ಸ್ಮಾರ್ಟ್ ವಾಚ್‌ಗಳು, ಕ್ಯಾಲ್ಕ್ಯುಲೇಟರ್‌ಗಳನ್ನು ಅಥವಾ ಇತರೆ ಎಲೆಕ್ಟ್ರಾನಿಕ್/ಕಮ್ಯುನಿಕೇಶನ್ ಉಪಕರಣಗಳನ್ನು ಪರೀಕ್ಷಾ ಆವರಣದ ಒಳಗೆ ತರುವುದನ್ನು ನಿಷೇಧಿಸಲಾಗಿದೆ.**

***Note:*** *English version of the instructions is printed on the back cover of this booklet.*



SEAL

Scanned with CamScanner

1. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

**ಹೇಳಿಕೆ (A) :** ಸುಸ್ಥಿರ ಅಭಿವೃದ್ಧಿ ಮಾನವ ಸಮಾಜದ ಯೋಗಕ್ಷೇಮಕ್ಕೆ ಮಹತ್ವವಾಗಿದೆ.

**ಕಾರಣ (R) :** ಪರಿಸರಾತ್ಮಕವಾದ ದೃಢ ನೀತಿಗಳು ಪರಿಸರಕ್ಕೆ ನಷ್ಟವಲ್ಲ ಅಥವಾ ಸ್ವಾಭಾವಿಕ ಸಂಪನ್ಮೂಲಗಳನ್ನು ಬರಿದು ಮಾಡುತ್ತದೆ.

ಕೆಳಗೆ ನೀಡಲಾದ ಸಂಕೇತದಿಂದ ಸರಿಯಾದ ಉತ್ತರವನ್ನು ಆರಿಸಿ :

(1) **(A)** ಮತ್ತು **(R)** ಎರಡೂ ಸರಿ ಮತ್ತು **(R), (A)**ನ ಸರಿಯಾದ ವಿವರಣೆಯಾಗಿದೆ.

(2) **(A)** ಮತ್ತು **(R)** ಎರಡೂ ಸರಿ ಆದರೆ **(R), (A)**ನ ಸರಿಯಾದ ವಿವರಣೆಯಲ್ಲ.

(3) **(A)** ಸರಿಯಾಗಿದೆ ಮತ್ತು **(R)** ತಪ್ಪಾಗಿದೆ.

(4) **(A)** ಮತ್ತು **(R)** ಎರಡೂ ತಪ್ಪಾಗಿವೆ.

2. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

**ಹೇಳಿಕೆ (A) :** ಒಳಗಿನ ವಾಯುಮಾಲಿನ್ಯ ಒಂದು ತೀವ್ರ ಆರೋಗ್ಯದ ಅಪಾಯವಾಗಿದೆ.

**ಕಾರಣ (R) :** ವಾಯು ಮಾಲಿನ್ಯಗಳ ಚೆದರಿಕೆಯು ಒಳಗಿನ ವಾತಾ ವರಣದಲ್ಲಿ ಸಂಭವನೀಯ ವಾಗಿ ಪರಿಮಿತಿಯಲ್ಲಿದೆ.

ಕೆಳಗೆ ನೀಡಲಾದ ಸಂಕೇತ ದಿಂದ ಸರಿಯಾದ ಉತ್ತರವನ್ನು ಆರಿಸಿ :

(1) **(A)** ಮತ್ತು **(R)** ಎರಡೂ ಸರಿಯಾಗಿವೆ ಮತ್ತು **(R)** *(A)*ನ ಸರಿಯಾದ ವಿವರಣೆಯಾಗಿದೆ.

(2) **(A)** ಮತ್ತು **(R)** ಎರಡೂ ಸರಿಯಾಗಿವೆ ಆದರೆ **(R)** **(A)**ನ ಸರಿಯಾದ ವಿವರಣೆಯಲ್ಲ.

(3) **(A)** ಸರಿಯಾಗಿದೆ ಮತ್ತು **(R)** ತಪ್ಪಾಗಿದೆ.

(4) **(A)** ಮತ್ತು **(R)** ಎರಡೂ ತಪ್ಪಾಗಿವೆ.

3. ನೇರಳಾತೀತ ಬೆಳಕಿನ ಅಣು ಪ್ರಕ್ರಿಯೆಯನ್ನು ಇದರ ಮುಖಾಂತರ ಪ್ರಮುಖವಾಗಿ ಪ್ರತಿಬಿಂಬಿಸಲಾಗುತ್ತದೆ.

(1) DNAನಲ್ಲಿ ಹೈಡ್ರೋಜನ್ ಬಂಧಗಳ ವಿನಾಶ

(2) ಫೋಟೋ ಡೈನಾಮಿಕ್ ಕ್ರಿಯೆ

(3) ಪ್ಯೂರೀನ್ ಮತ್ತು ಪಿರಮಿಡೈನ್‌ನ ರಚನೆ

(4) ಸ್ಟಿಕ್ಕಿ ಮೆಟಾಪೇಸ್‌ನ ರಚನೆ

4. ನಮ್ಮ ನೀರಿನ ಮಾರ್ಗಗಳನ್ನು ತಲುಪಲು ಮಾರ್ಜಕಗಳು ಮತ್ತು ಫಲವತ್ತಾರಕಗಳಿರುವ ತ್ಯಾಜ್ಯಗಳು ಫಾಸ್ಫೇಟನ್ನು ಒಳಗೊಂಡಿರುವಾಗ, ನೀರಿನ ಮಾರ್ಗಗಳು ಮೀನಿನ ಉಸಿರು ಕಟ್ಟಿಸುವುದಕ್ಕೆ ಕಾರಣವಾಗುವ ನೀರಿನಿಂದ ಆಕ್ಸಿಜನ್ ಅಧಿಕವಾಗಿ ಉದ್ಭವಾಗಿ ಬರುತ್ತದೆ. ಈ ಪ್ರಕ್ರಿಯೆಯನ್ನು ಹೀಗೆ ಕರೆಯಲಾಗುತ್ತದೆ

(1) ಫಾಸ್ಫಟೈಜೇಷನ್

(2) ಗ್ರಾಮಸಾರ ಮರುಬಳಕೆ

(3) ಎಂಥ್ರೋಫಿಕೇಷನ್

(4) ಮೇಲಿನ ಯಾವುದೂ ಅಲ್ಲ

5. ನಿರ್ಮೂಲನ ಮಾಡುವ ಉಪದ್ರವಗಳಿಗೆ ಪೆಸ್ಟಿಸೈಡ್ಸ್ ಬಳಸುವ ಬದಲಾಗಿ, ಅದರ ಸಂಖ್ಯೆಗಳನ್ನು ನಿಯಂತ್ರಿಸುವುದಕ್ಕೆ ಸ್ವಾಭಾವಿಕ ಪ್ರಿಡೇಟರ್ಸ್ ಅಥವಾ ಪ್ಯಾರಾಸೈಟ್ಸ್‌ಗಳ ಉಪದ್ರವಗಳನ್ನು ಬಳಸಲು ಆವರ್ತನೀಯತೆ ಬೇರೊಂದು ವಿಧಾನವಾಗಿದೆ. ಇದರ ಪರಿಸರ ಸ್ನೇಹಿ ವಿಧಾನದಲ್ಲಿ ಈ ಪದದಿಂದ ಹೇಳಲಾಗುತ್ತದೆ

(1) ಜೈವಿಕ ನಿಯಂತ್ರಣ

(2) ಪ್ರಿಡೇಟರ್ ಬಿಡುಗಡೆ

(3) ಕೀಟನಾಶಕ ನಿರ್ವಹಣೆ

(4) ಮೇಲಿನ ಯಾವುದೂ ಅಲ್ಲ



Scanned with CamScanner

6. ಕೆಳಗಿನ ಯಾವ ಒಂದು ಪದವನ್ನು ಜೀವಿಯಿಂದ ಆಕ್ರಮಿಸಿದ ಭೌತಿಕ ಅಂತರ/ಸ್ಥಳವಾಗಿ ಮಾತ್ರ ವರ್ಣಿಸುವುದಿಲ್ಲ, ಆದರೆ ಜೀವಿಗಳ ಸಮುದಾಯದಲ್ಲಿ ಅದರ ಕ್ರಿಯಾತ್ಮಕವನ್ನು ಸಹ ವರ್ಣಿಸಲಾಗುತ್ತದೆ?

(1) ಇಕೋಟೋನ್

(2) ಪರಿಸರ ನಿಚ್ (Niche)

(3) ಆವಾಸ

(4) ಸಮ ಶ್ರೇಣಿ/ದರ್ಜೆ

7. ಕೆಳಗಿನ ಯಾವ ಪ್ರಕ್ರಿಯೆಯು ಭೂಮಿಯ ಮೇಲಿನ ಕಾರ್ಬನ್ ಚಕ್ರದಿಂದ ಕಾರ್ಬನ್ ಡೈ ಆಕ್ಸೈಡನ್ನು ತೆಗೆದುಹಾಕುತ್ತದೆ?

*(i)* ಫೋಟೋಸಿಂಥೆಸಿಸ್/ದ್ಯುತಿ ಸಂಶ್ಲೇಷಣೆ

*(ii)* ಉಸಿರಾಟ

*(iii)* ಭಾಷ್ಪವಿಸರ್ಜನೆ

*(iv)* ಜ್ವಾಲಾಮುಖಿ ಹೊರಚಿಮ್ಮಿಕೆ

(1) *(i)* ಮತ್ತು *(iv)* ಮಾತ್ರ

(2) *(i)* ಮಾತ್ರ

(3) *(ii)*, *(iii)* ಮತ್ತು *(iv)* ಮಾತ್ರ

(4) *(i)*, *(ii)*, *(iii)* ಮತ್ತು *(iv)*

8. ಕೆಳಗಿನ ಯಾವ ಒಂದನ್ನು ಭೌಗೋಳಿಕ ಪ್ರದೇಶದ ಜೀವ ವೈವಿಧ್ಯತೆಯಲ್ಲಿ ಪರಿಗಣಿಸಲಾಗುತ್ತದೆ?

*(i)* ಜಾಗತಿಕ ತಾಪಮಾನ

*(ii)* ಆವಾಸದ ಖಂಡನ

*(iii)* ಏಲಿಯನ್ ಪ್ರಭೇದಗಳ ಆಕ್ರಮಣ

*(iv)* ಸಸ್ಯ ಸಂಕುಲದ ವೃದ್ಧಿ

ಕೆಳಗೆ ನೀಡಲಾದ ಸಂಕೇತಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆರಿಸಿ :

(1) *(i)* ಮತ್ತು *(ii)* ಮಾತ್ರ

(2) *(ii)* ಮತ್ತು *(iii)* ಮಾತ್ರ

(3) *(i)*, *(ii)* ಮತ್ತು *(iii)* ಮಾತ್ರ

(4) *(i)*, *(ii)*, *(iii)* ಮತ್ತು *(iv)*

9. ಆವಾಸ ಮತ್ತು ಸಂಬಂಧಪಟ್ಟ ನಿರ್ದಿಷ್ಟ ಪ್ರಾಣಿಯ ಬೆಸ ಸಂಯೋಜನೆಯನ್ನು ಗುರುತಿಸಿ:

(1) ಸುಂದರ್‌ಬನ್ಸ್ – ಬೆಂಗಾಲ್ ಟೈಗರ್

(2) ಪೆರಿಯಾರ್ – ಆನೆ

(3) ಕಛ್‌ನ ರನ್ – ಕಾಡಿನ ಕತ್ತೆ

(4) ಡಚಿಗನ್ ರಾಷ್ಟ್ರೀಯ ಉದ್ಯಾನ – ಬೆಟ್ಟದ ಚಿರತೆ

10. ಕೆಳಗಿನ ಯಾವ ಸಮ್ಮೇಳನವು ವನ್ಯಜೀವಿ ಮಾದರಿಗಳ ಅಂತರರಾಷ್ಟ್ರೀಯ ವ್ಯಾಪಾರ ನಿಯಮಿಸುವುದಕ್ಕೆ ಉದ್ದೇಶಿಸಿದೆ?

(1) ಬನ್ (Bonn) ಸಮ್ಮೇಳನ

(2) ರಾಮ್‌ಸರ್ ಸಮ್ಮೇಳನ

(3) ಸೈಟ್ಸ್ ಸಮ್ಮೇಳನ

(4) ವಿಯೆನಾ ಸಮ್ಮೇಳನ



Scanned with CamScanner

11. ಮಾನವ ಮತ್ತು ಜೈವಿಕ ಗೋಲದ ಕಾರ್ಯಕ್ರಮವನ್ನು ಯಾವ ಅಂತರರಾಷ್ಟ್ರೀಯ ಸಂಸ್ಥೆಯು ಜಾಗತಿಕವಾಗಿ ಪ್ರಾರಂಭಿಸಿದೆ?
(1) IUCN
(2) UNESCO
(3) UNEP
(4) ಅಂತರರಾಷ್ಟ್ರೀಯ ಸಂರಕ್ಷಣೆ

12. ಆಮ್ಲ ಮಳೆಯ ಇತ್ತೀಚಿನ ವರದಿಗಳು ಕೆಲವು ಕೈಗಾರಿಕಾ ನಗರಗಳಲ್ಲಿ ಇದರಿಂದ ವಾತಾವರಣ ಮಾಲಿನ್ಯ ಪರಿಣಾಮಕ್ಕೆ ಕಾರಣವಾಗಿವೆ.
(1) ಫಾಸಿಲ್ ಇಂಧನವನ್ನು ಸುಡುವುದರಿಂದ ಅತಿಯಾಗಿ ಬಿಡುಗಡೆಯಾದ $NO_2$ ಮತ್ತು $SO_2$
(2) ಮರ ಮತ್ತು ಇದ್ದಿಲಿನಂತಿರುವ ಇಂಧನವನ್ನು ಸುಡುವುದರಿಂದ ಅಧಿಕವಾಗಿ ಬಿಡುಗಡೆಯಾದ $CO_2$ ಅರಣ್ಯಗಳನ್ನು ಕಡಿಯುವುದರಿಂದ ಮತ್ತು ಹೆಚ್ಚಿದ ಪ್ರಾಣಿ ಜನಸಂಖ್ಯೆಯಿಂದ
(3) ಕೈಗಾರಿಕಾ ಸಸ್ಯಗಳು ಮತ್ತು ಕಲ್ಲಿದ್ದಲ ಅನಿಲದಿಂದ $NH_3$ಯ ಅತಿಯಾದ ಬಿಡುಗಡೆ
(4) ಕೋಕ್‌ನ ದಹನವನ್ನು ಪೂರ್ಣಗೊಳಿಸುವುದರಿಂದ ಇದ್ದಿಲು ಮತ್ತು ಆಕ್ಸಿಜನ್‌ನ ಕೊರತೆಯಲ್ಲಿ ಇತರೆ ಕಾರ್ಬೋನೇಶಿಯಸ್ ಇಂಧನಗಳಿಂದ ವಾತಾವರಣದಲ್ಲಿ COನ ಅಧಿಕ ಬಿಡುಗಡೆ

13. ಕೆಳಗಿನ ಹುಲಿ ಮೀಸಲು ಅರಣ್ಯಗಳ ನಡುವೆ ಯಾವ ಒಂದು "ಮಹತ್ವದ ಹುಲಿ ಆವಾಸಸ್ಥಾನ"ದ ಅಡಿಯಲ್ಲಿ ಬೃಹತ್ ಪ್ರದೇಶವನ್ನು ಹೊಂದಿದೆ?
(1) ಕಾರ್ಬೆಟ್
(2) ರನ್‌ಥಂಬೋರ್
(3) ನಾಗಾರ್ಜುನಸಾಗರ್ - ಶ್ರೀಶೈಲಂ
(4) ಸುಂದರ್‌ಬನ್ಸ್

14. ಭಾರತದ ಆನೆಗಳಿಗೆ ಸಂಬಂಧಿಸಿದಂತೆ ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :
*(i)* ಆನೆಯ ಗುಂಪಿನ ಲೀಡರ್ ಸ್ತ್ರೀ ಆನೆಯಾಗಿರುತ್ತದೆ.
*(ii)* ಗರಿಷ್ಠ ಗರ್ಭಾವಧಿ 22 ತಿಂಗಳುಗಳಾಗಿರುವುದು.
*(iii)* ಆನೆಯು 40 ವರ್ಷಗಳ ವಯಸ್ಸಿನವರೆಗೆ ಮಾತ್ರ ಸಾಮಾನ್ಯವಾಗಿ ಮರಿ ಹಾಕುವುದು.
*(iv)* ಭಾರತದಲ್ಲಿರುವ ರಾಜ್ಯಗಳ ನಡುವೆ ಕೇರಳದಲ್ಲಿ ಆನೆಗಳ ಸಂಖ್ಯೆ ಅಧಿಕವಾಗಿದೆ.

ಮೇಲೆ ನೀಡಿದ ಯಾವ ಹೇಳಿಕೆಗಳು ಸರಿಯಾಗಿವೆ?
(1) *(i)* ಮತ್ತು *(ii)* ಮಾತ್ರ
(2) *(ii)* ಮತ್ತು *(iv)* ಮಾತ್ರ
(3) *(iii)* ಮಾತ್ರ
(4) *(i)*, *(iii)* ಮತ್ತು *(iv)*

15. ಕೆಳಗಿನ ಯಾವ ಸಂರಕ್ಷಣಾ ಪ್ರದೇಶಗಳು ಕಾವೇರಿ ಜಲಾನಯನ ಪ್ರದೇಶದಲ್ಲಿವೆ?
*(i)* ನಾಗರಹೊಳೆ ರಾಷ್ಟ್ರೀಯ ಉದ್ಯಾನ
*(ii)* ಪಾಪಿಕೊಂಡ ರಾಷ್ಟ್ರೀಯ ಉದ್ಯಾನ
*(iii)* ಸತ್ಯಮಂಗಳಂ ರಾಷ್ಟ್ರೀಯ ಉದ್ಯಾನ
*(iv)* ಹೊಯ್ನಾಡು ವನ್ಯಜೀವಿ ಅಭಯಾರಣ್ಯ
(1) *(i)* ಮತ್ತು *(ii)* ಮಾತ್ರ
(2) *(iii)* ಮತ್ತು *(iv)* ಮಾತ್ರ
(3) *(i)*, *(iii)* ಮತ್ತು *(iv)* ಮಾತ್ರ
(4) *(i)*, *(ii)*, *(iii)* ಮತ್ತು *(iv)*



Scanned with CamScanner

16. ಗ್ರಾಮೀಣ ರಸ್ತೆ ನಿರ್ಮಾಣದಲ್ಲಿ ಪರಿಸರದ ಸುಸ್ಥಿರತೆಯನ್ನು ಖಚಿತಪಡಿಸುವುದಕ್ಕಾಗಿ ಅಥವಾ ಕಾರ್ಬನ್ ಹೆಜ್ಜೆಗುರುತನ್ನು ಕಡಿಮೆ ಮಾಡಲು ಕೆಳಗಿನ ಯಾವುದನ್ನು ಬಳಸಲು ಪ್ರಾಶಸ್ತ್ಯ ನೀಡಲಾಗುತ್ತದೆ?

(i) ತಾಮ್ರಕಟ್ಟ

(ii) ಶೀತಮಿಶ್ರಣ ಆಸ್‌ಫಾಲ್ಟ್ ತಂತ್ರಜ್ಞಾನ

(iii) ಭೂ ನೆಯ್ಗೆ/ಟೆಕ್ಸ್‌ಟೈಲ್

(iv) ಬಿಸಿಮಿಶ್ರಣ ಆಸ್‌ಫಾಲ್ಟ್ ತಂತ್ರಜ್ಞಾನ

(v) ಪೋರ್ಟ್‌ಲ್ಯಾಂಡ್ ಸಿಮೆಂಟು

ಕೆಳಗೆ ನೀಡಲಾದ ಸಂಕೇತವನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆರಿಸಿ :

(1) *(i)*, *(ii)* ಮತ್ತು *(iii)* ಮಾತ್ರ

(2) *(ii)*, *(iii)* ಮತ್ತು *(iv)* ಮಾತ್ರ

(3) *(iv)* ಮತ್ತು *(v)* ಮಾತ್ರ

(4) *(i)*, ಮತ್ತು *(v)* ಮಾತ್ರ

17. *X* ಮತ್ತು *Y* ಕ್ರಮವಾಗಿ ರೂ.15,000 ಮತ್ತು ರೂ.20,000 ಬಂಡವಾಳ ಹೂಡಿ ಪಾಲುದಾರಿಕೆಯಲ್ಲಿ ಒಂದು ವ್ಯವಹಾರವನ್ನು ಪ್ರಾರಂಭಿಸುತ್ತಾರೆ. ಪಾಲುದಾರಿಕೆ ಸಂಸ್ಥೆಯು ಗಳಿಸಿದ ಲಾಭದಲ್ಲಿ *X* ನು 7,500 ರೂ.ಗಳನ್ನು ತನ್ನ ಪಾಲು ಎಂದು ಪಡೆಯುತ್ತಾನೆ. ಹಾಗಾದರೆ *Y* ನ ಲಾಭದ ಪಾಲು ಎಷ್ಟು?

(1) ರೂ. 15,000

(2) ರೂ. 12,500

(3) ರೂ. 10,000

(4) ರೂ. 12,000

18. ಗ್ರಂಥಾಲಯವೊಂದರಲ್ಲಿ 30% ಪುಸ್ತಕಗಳು ಇಂಗ್ಲೀಷ್ ಭಾಷೆಯಲ್ಲಿವೆ. 50% ಪುಸ್ತಕಗಳು ಹಿಂದಿ ಭಾಷೆಯಲ್ಲಿವೆ. ಉಳಿದ 500 ಪುಸ್ತಕಗಳು ಬೇರೆ ಭಾಷೆಯಲ್ಲಿವೆ. ಹಾಗಾದರೆ ಗ್ರಂಥಾಲಯದಲ್ಲಿರುವ ಒಟ್ಟು ಪುಸ್ತಕಗಳ ಸಂಖ್ಯೆ ಎಷ್ಟು?

(1) 2700

(2) 2750

(3) 2555

(4) 2500

19. ರಮೇಶನು ಒಂದು ಗಡಿಯಾರವನ್ನು ರೂ. 990 ರೂ.ಗಳಿಗೆ ಖರೀದಿಸಿ, ಶೇಕಡಾ 20%ರಷ್ಟು ಲಾಭ ಗಳಿಸಬೇಕಾದರೆ, ಗಡಿಯಾರವನ್ನು ಯಾವ ದರಕ್ಕೆ ಮಾರಾಟ ಮಾಡಬೇಕು?

(1) ರೂ. 1,090

(2) ರೂ. 1,288

(3) ರೂ. 1,188

(4) ರೂ. 990

20. ರೂ. 2,900ರ ಮೊತ್ತವು ಸರಳ ಬಡ್ಡಿಯಲ್ಲಿ 3 ವರ್ಷಗಳಲ್ಲಿ ರೂ. 3,422 ಆಗಿರುತ್ತದೆ. ಒಂದು ವೇಳೆ ಬಡ್ಡಿ ದರವನ್ನು 3% ನಷ್ಟು ಹೆಚ್ಚಿಸಿದರೆ, ಅದೇ ಅವಧಿಯಲ್ಲಿ ಅದು ಎಷ್ಟುರಮಟ್ಟಿಗೆ ಆಗುತ್ತದೆ?

(1) ರೂ. 4,465

(2) ರೂ. 3,683

(3) ರೂ. 3,596

(4) ಮೇಲಿನ ಯಾವುದೂ ಅಲ್ಲ



Scanned with CamScanner

**21.** ಒಂದು ವರ್ಷದ ಮಾರ್ಚ್ 5ನೇ ದಿನಾಂಕವು ಸೋಮವಾರವಾಗಿದೆ. ಅದೇ ವರ್ಷದ ಯಾವ ತಿಂಗಳಿನಲ್ಲಿ ಮತ್ತೆ 5ನೇ ದಿನಾಂಕವು ಸೋಮವಾರದಂದು ಬರುತ್ತದೆ?

(1) ಜುಲೈ

(2) ಸೆಪ್ಟೆಂಬರ್

(3) ನವೆಂಬರ್

(4) ಡಿಸೆಂಬರ್

**22.** ಒಂದು ವಿಮಾನಯಾನ ಸಂಸ್ಥೆಯಿಂದ ಒಂದು ನಿರ್ದಿಷ್ಟ ಪ್ರಯಾಣದ ಶುಲ್ಕವನ್ನು 5 : 7ರ ಅನುಪಾತದಲ್ಲಿ ಹೆಚ್ಚಿಸಿದಾಗ, ಪ್ರಯಾಣಕ್ಕಾಗಿ ಟಿಕೆಟ್‌ನ ಬೆಲೆಯು ರೂ.1,421 ಆಗುತ್ತದೆ. ಶುಲ್ಕದಲ್ಲಿನ ಹೆಚ್ಚಳವನ್ನು ಗುರುತಿಸಿ.

(1) ರೂ. 406

(2) ರೂ. 404

(3) ರೂ. 410

(4) ರೂ. 380

**23.** ದಿವ್ಯ, ದೀಪ, ದೀಪ್ತಿ ಎಂಬುವವರು ಒಂದು ಅಂಗಡಿಯನ್ನು ಪ್ರಾರಂಭಿಸಲು ರೂ.27,000, ರೂ.81,000, ರೂ.72,000ಗಳನ್ನು ಕ್ರಮವಾಗಿ ಹೂಡಿಕೆ ಮಾಡಿರುತ್ತಾರೆ. ಒಂದು ವರ್ಷದ ನಂತರ ಲಾಭವನ್ನು ಇವರುಗಳಿಗೆ ಹಂಚಲಾಗುತ್ತದೆ. ಒಂದು ವೇಳೆ ದಿವ್ಯ ರೂ.36,000 ಗಳನ್ನು ಪಡೆದರೆ, ಒಟ್ಟು ಲಾಭದ ಮೊತ್ತವೆಷ್ಟು?


(1) ರೂ. 98,000

(2) ರೂ. 1,08,000

(3) ರೂ. 2,08,000

(4) ರೂ. 2,40,000

ನಿರ್ದೇಶನ : ಪೈ ಚಾರ್ಟ್ ಮತ್ತು ನೀಡಲಾದ ಮಾಹಿತಿಯನ್ನು ಅಧ್ಯಯನ ಮಾಡಿ ಮತ್ತು ಕೆಳಗಿನ **24** ರಿಂದ **26** ಪ್ರಶ್ನೆಗಳಿಗೆ ಉತ್ತರಿಸಿ :




**24.** ಕ್ರೀಡೆಯನ್ನು ಹವ್ಯಾಸವಾಗಿ ಆರಿಸಿಕೊಂಡ ಶಾಲೆಯೊಂದರಲ್ಲಿ 1150 ವಿದ್ಯಾರ್ಥಿಗಳಿದ್ದಾರೆ. ಎಷ್ಟು ವಿದ್ಯಾರ್ಥಿಗಳು ಪುಸ್ತಕ ಓದುವ ಹವ್ಯಾಸವನ್ನು ಹೊಂದಿದ್ದಾರೆ?

(1) 350

(2) 450

(3) 300

(4) 500

**25.** ಡ್ರಾಯಿಂಗ್‌ನಲ್ಲಿ ಶೇಕಡಾವಾರು ವಿದ್ಯಾರ್ಥಿಗಳ ಪ್ರಕಾರ ವಲಯದ ಕೋನ ಯಾವುದು?

(1) 44°

(2) 24°

(3) 32°

(4) 76°

**26.** ಛಾಯಾಗ್ರಹಣ ಮತ್ತು ಸಂಗೀತವನ್ನು ಒಟ್ಟಿಗೆ ಆಯ್ಕೆ ಮಾಡಿದ ಶಾಲೆಯ ವಿದ್ಯಾರ್ಥಿಗಳ ಸಂಖ್ಯೆ, ಒಂದುವೇಳೆ ಒಟ್ಟು 5000 ಇದ್ದಲ್ಲಿ

(1) 3000

(2) 4000

(3) 1400

(4) 2500

27. ಒಬ್ಬ ವಿದ್ಯಾರ್ಥಿಯು ಆತನ ವಿದ್ಯಾರ್ಥಿನಿಲಯದಿಂದ ಕಾಲೇಜಿಗೆ 10km/h ವೇಗದಲ್ಲಿ ಹೋಗುತ್ತಾನೆ ಮತ್ತು ಆತನ ಕಾಲೇಜಿನಿಂದ ವಸತಿನಿಲಯಕ್ಕೆ 15km/hನ ವೇಗದಲ್ಲಿ ಹಿಂತಿರುಗುತ್ತಾನೆ. ಆತನ ಸರಾಸರಿ ವೇಗ ಎಷ್ಟು?

(1) 12·5 km/h

(2) 10.5 km/h

(3) 12 km/h

(4) ಮೇಲಿನ ಯಾವುದೂ ಅಲ್ಲ

28. ಕೆಳಗೆ ನಾಲ್ಕು ತರಹದ ದತ್ತಾಂಶಗಳನ್ನು ಕೊಡಲಾಗಿದೆ. ಇದರಲ್ಲಿ ಕಡಿಮೆ ವ್ಯತ್ಯಾಸವಿರುವ ದತ್ತಾಂಶ :

*(i)* 7, 8, 9, 10, 11

*(ii)* 3, 6, 9, 12, 15

*(iii)* 1, 5, 9, 13, 17

*(iv)* 2, 4, 6, 13, 18

(1) *(iv)*

(2) *(iii)*

(3) *(ii)*

(4) *(i)*

29. ಎರಡು ನಾಣ್ಯಗಳನ್ನು ಮೇಲೆ ಹಾರಿಸಿದಾಗ ಒಂದು ತಲೆ ಮೇಲ್ಭಾಗ ಬೀಳುವ ಸಂಭವನೀಯತೆಯು :

(1) 1/4

(2) 1/2

(3) 1/3

(4) 2/3

30. ಈ ಕೆಳಗಿನ ಮಾತೃಕೆಯನ್ನು ಪೂರ್ಣಗೊಳಿಸಿ :

$$\begin{bmatrix} 1 & 0 & 1 \\ 4 & 1 & 0 \\ 9 & 4 & ? \end{bmatrix}$$

(1) 0

(2) 1

(3) 4

(4) 9

31. ಎಷ್ಟು ವಿಧಗಳಲ್ಲಿ 6 ಪರೀಕ್ಷೆಯ ಪ್ರಶ್ನೆಪತ್ರಿಕೆಗಳಲ್ಲಿ ಎರಡು ಭೌತಶಾಸ್ತ್ರ ಪ್ರಶ್ನೆಪತ್ರಿಕೆಗಳಿದ್ದರೆ ಅವು ಎಂದಿಗೂ ಒಟ್ಟಿಗೆ ಬರದಂತೆ, ಪ್ರಶ್ನೆಪತ್ರಿಕೆಗಳನ್ನು ಜೋಡಿಸಬಹುದು?

(1) 720

(2) 240

(3) 480

(4) 120

32. A ನಲ್ಲಿಯು ಒಂದು ಟ್ಯಾಂಕನ್ನು 10 ಗಂಟೆಗಳಲ್ಲೂ, B ನಲ್ಲಿಯು 20 ಗಂಟೆಗಳಲ್ಲೂ ತುಂಬಿಸುತ್ತದೆ ಹಾಗೂ C ನಲ್ಲಿಯು 40 ಗಂಟೆಗಳಲ್ಲಿ ಪೂರ್ತಿ ಟ್ಯಾಂಕನ್ನು ಖಾಲಿ ಮಾಡುತ್ತದೆ. ಹಾಗಾದರೆ ಮೂರೂ ನಲ್ಲಿಗಳನ್ನು ಏಕಕಾಲದಲ್ಲಿ ತೆರೆದಿಟ್ಟಾಗ, ಟ್ಯಾಂಕ್ ತುಂಬಲು ಬೇಕಾದ ಸಮಯ

(1) 8 ಗಂಟೆಗಳು

(2) 10 ಗಂಟೆಗಳು

(3) 14 ಗಂಟೆಗಳು

(4) 15 ಗಂಟೆಗಳು



Scanned with CamScanner

33. ಒಂದು ಚೌಕದ ಪ್ರತಿ ಬದಿಯನ್ನು ಶೇ. 25 ಕಡಿಮೆ ಮಾಡಿದರೆ ಅದರ ವಿಸ್ತೀರ್ಣದಲ್ಲಿ ಆಗುವ ಶೇಕಡಾವಾರು ಬದಲಾವಣೆ ಎಷ್ಟು?

(1) 20%

(2) 56·25%

(3) 43·75%

(4) 15·5%

34. ಆಯತದಲ್ಲಿ ಬಿಟ್ಟುಹೋಗಿರುವ ಸಂಖ್ಯೆಯನ್ನು ಕಂಡುಹಿಡಿಯಿರಿ :

| | | |
|---|---|---|
| 8 | 8 | 20 |
| 10 | 9 | 23 |
| 12 | 11 | ? |

(1) 26

(2) 25

(3) 24

(4) 28

35. ಒಂದು ಪರೀಕ್ಷೆಯಲ್ಲಿ ಒಬ್ಬ ವಿದ್ಯಾರ್ಥಿಯು ಪ್ರತಿ ಸರಿ ಉತ್ತರಕ್ಕೆ 4 ಅಂಕಗಳನ್ನು ಗಳಿಸುತ್ತಾನೆ, ಮತ್ತು ಪ್ರತಿ ತಪ್ಪು ಉತ್ತರಕ್ಕೆ 1 ಅಂಕ ಕಳೆದುಕೊಳ್ಳುತ್ತಾನೆ. ಆತ ಒಟ್ಟು 60 ಪ್ರಶ್ನೆಗಳಿಗೆ ಉತ್ತರಿಸಿ 130 ಅಂಕ ಗಳಿಸಿದರೆ, ಸರಿಯಾಗಿ ಉತ್ತರಿಸಿದ ಪ್ರಶ್ನೆಗಳ ಸಂಖ್ಯೆ

(1) 35

(2) 38

(3) 40

(4) 42

36. ಭಾರತದ ಮೊದಲ ಹಣಕಾಸು ಆಯೋಗದ ಅಧ್ಯಕ್ಷರು

(1) ಕೆ. ಸಿ. ಪಂಥ್

(2) ಮನಮೋಹನ್ ಸಿಂಗ್

(3) ಕೆ. ಸಿ. ನಿಯೋಗಿ

(4) ವಿಜಯ್ ಕೇಳ್ಕರ್

37. ಭಾರತದ 10ನೇ ಪಂಚವಾರ್ಷಿಕ ಯೋಜನೆಯ ಅವಧಿ

(1) 1992–1997

(2) 1997–2002

(3) 2002–2007

(4) 2007–2012

38. ಪ್ರಪಂಚದಲ್ಲಿ ಮೊಟ್ಟಮೊದಲ ಬಾರಿಗೆ ಜಿ.ಎಸ್.ಟಿ.ಯನ್ನು ಜಾರಿಗೆ ತಂದ ರಾಷ್ಟ್ರ

(1) ಫ್ರಾನ್ಸ್

(2) ಇಂಗ್ಲೆಂಡ್

(3) ಅಮೆರಿಕಾ

(4) ನಾರ್ವೆ

39. ಅವಕಾಶ ವೆಚ್ಚ ಸಿದ್ಧಾಂತವು ಏನನ್ನು ಉಲ್ಲೇಖಿಸುತ್ತದೆ?

(1) ಹೆಚ್ಚಿನ ಸರಕು ಮತ್ತು ಸೇವೆಗಳನ್ನು ಉತ್ಪಾದಿಸುವ ಅವಕಾಶ

(2) ನೈಸರ್ಗಿಕ ಸಂಪನ್ಮೂಲಗಳನ್ನು ಬಳಸಿಕೊಳ್ಳುವ ಅವಕಾಶ

(3) ಇನ್ನೊಂದು ವಸ್ತುವಿನ ಕೆಲ ಪ್ರಮಾಣವನ್ನು ಹೊಂದಲು ಮತ್ತೊಂದು ವಸ್ತುವಿನ ಪ್ರಮಾಣವನ್ನು ತ್ಯಜಿಸುವ ಅವಕಾಶ

(4) ಅಸ್ತಿತ್ವದಲ್ಲಿರುವ ಮಾನವ ಸಂಪನ್ಮೂಲಗಳನ್ನು ಉಪಯೋಗಿಸಿಕೊಳ್ಳುವ ಅವಕಾಶ



Scanned with CamScanner

40. 2021-22ರ ಸಾಲಿನಲ್ಲಿ ಕರ್ನಾಟಕ ರಾಜ್ಯದ ಬೆಳವಣಿಗೆ ದರ (ಸ್ಥಿರ ಬೆಲೆಗಳಲ್ಲಿ)

(1) 8·4%

(2) 9·5%

(3) 7·4%

(4) 6·4%

41. 2020-21ರ ನೀತಿ ಆಯೋಗದ ಎಸ್.ಡಿ.ಜಿ. ಸೂಚ್ಯಂಕದ ಪ್ರಕಾರ ಕರ್ನಾಟಕದ ಸ್ಥಾನ

(1) 2ನೇ ಸ್ಥಾನ

(2) 3ನೇ ಸ್ಥಾನ

(3) 4ನೇ ಸ್ಥಾನ

(4) 5ನೇ ಸ್ಥಾನ

42. ಭಾರತದಲ್ಲಿ ಜಾರಿಗೊಂಡ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮಗಳ ಅನುಕ್ರಮವನ್ನು ಗುರುತಿಸಿರಿ:

*(i)* ಮಹಾತ್ಮಾ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಕಾಯ್ದೆ

*(ii)* ಸಮಗ್ರ ಗ್ರಾಮೀಣ ಅಭಿವೃದ್ಧಿ ಕಾರ್ಯಕ್ರಮ

*(iii)* ಸಮುದಾಯ ಅಭಿವೃದ್ಧಿ ಕಾರ್ಯಕ್ರಮ

*(iv)* ಜವಾಹರ್ ರೋಜ್‌ಗಾರ್ ಯೋಜನೆ

ಕೋಡ್‌ಗಳು :

(1) *(iii), (ii), (iv), (i)*

(2) *(i), (ii), (iii), (iv)*

(3) *(iv), (iii), (ii), (i)*

(4) *(i), (iii), (ii), (iv)*

43. 'ಹಿಮ್ಮುಖಿಕೆ' ಬೆಳವಣಿಗೆ ಎಂದರೇನು?

(1) ಆರ್ಥಿಕ ಬೆಳವಣಿಗೆಯು ದೇಶದ ಹಿಂದಿನ ಬೆಳವಣಿಗೆಗಿಂತ ಕೆಟ್ಟದ್ದಾಗಿರುವುದು

(2) ಆರ್ಥಿಕ ಬೆಳವಣಿಗೆಯು ದೇಶದ ಹಿಂದಿನ ಬೆಳವಣಿಗೆಗಿಂತ ಉತ್ತಮ ಸ್ಥಿತಿಯಲ್ಲಿರುವುದು

(3) ಹಿಮ್ಮುಖ ಬೆಳವಣಿಗೆಯು ಆರ್ಥಿಕ ಸಮೃದ್ಧಿಯ ಸೂಚಕ

(4) ಹಿಮ್ಮುಖ ಬೆಳವಣಿಗೆಯು ಆರ್ಥಿಕ ಚೇತರಿಕೆಯ ಸೂಚಕ

44. ಯಾವ ರಾಜ್ಯ ಸರ್ಕಾರವು 'e-RUPI' ಅನ್ನು ಜಾರಿಮಾಡಲು NPCI ಮತ್ತು SBI ನೊಂದಿಗೆ ಪಾಲುದಾರಿಕೆ ಮಾಡಿಕೊಂಡಿದೆ?

(1) ಗುಜರಾತ್ ಸರಕಾರ

(2) ಪಂಜಾಬ್ ಸರಕಾರ

(3) ಕರ್ನಾಟಕ ಸರಕಾರ

(4) ಕೇರಳ ಸರಕಾರ

45. ''ಇಂಡಿಯನ್ ಅಗ್ರಿಕಲ್ಚರ್ ಟುವರ್ಡ್ಸ್ 2030'' ಪುಸ್ತಕವನ್ನು ನೀತಿ ಆಯೋಗ ಯಾವ ಸಂಸ್ಥೆಯೊಂದಿಗೆ ಸೇರಿ ಬಿಡುಗಡೆ ಮಾಡಿದೆ?

(1) UNEP

(2) FAO

(3) NABARD

(4) ICAR

46. ಭಾರತದ ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ಸಂಖ್ಯೆಯನ್ನು ಹೆಚ್ಚಿಸುವ ಅಧಿಕಾರ ಯಾರಿಗಿದೆ?

(1) ಭಾರತದ ರಾಷ್ಟ್ರಪತಿ

(2) ಭಾರತದ ಮುಖ್ಯ ನ್ಯಾಯಮೂರ್ತಿ

(3) ಸಂಸತ್ತು

(4) ಕಾನೂನು ಆಯೋಗ



Scanned with CamScanner

**47.** ಪಟ್ಟಿ *I* ರ ಜೊತೆ ಪಟ್ಟಿ *II* ನ್ನು ಹೊಂದಿಸಿ.

| ಪಟ್ಟಿ—*I* | ಪಟ್ಟಿ—*II* |
|---|---|
| *(i)* ನೀತಿ ಆಯೋಗ | *(a)* ನ್ಯಾಷನಲ್ ಪ್ರೊಗ್ರಾಂ ಅಂಡ್ ಪ್ರಾಜೆಕ್ಟ್ ಮ್ಯಾನೇಜ್‌ಮೆಂಟ್ ಪಾಲಿಸಿ ಫ್ರೇಮ್‌ವರ್ಕ್ (NPPMPF) |
| *(ii)* ಮಿನಿಸ್ಟ್ರಿ ಆಫ್ ಎಜುಕೇಶನ್ | *(b)* ಯೂನಿಕ್ ಲ್ಯಾಂಡ್ ಪಾರ್ಸಲ್ ಐಡೆಂಟಿಫಿಕೇಷನ್ ನಂಬರ್ (ULPIN) |
| *(iii)* ಮಿನಿಸ್ಟ್ರಿ ಆಫ್ ಜಲ್‌ಶಕ್ತಿ | *(c)* ರಾಷ್ಟ್ರೀಯ ಸ್ವಚ್ಛತಾ ಕೇಂದ್ರ |
| *(iv)* ಮಿನಿಸ್ಟ್ರಿ ಆಫ್ ರೂರಲ್ ಡೆವಲಪ್‌ಮೆಂಟ್ | *(d)* ಸ್ಕೀಂ ಫಾರ್ ಪ್ರಮೋಷನ್ ಆಫ್ ಅಕಾಡೆಮಿಕ್ ಅಂಡ್ ರಿಸರ್ಚ್ ಕೋಲಾಬರೇಷನ್ (SPARC) |
| | *(e)* ಅಟಲ್ ಬೀಮಿತ್ ವ್ಯಕ್ತಿ ಕಲ್ಯಾಣ್ ಯೋಜನಾ |

ಸಂಕೇತಗಳ ಸಹಾಯದಿಂದ ಸರಿ ಉತ್ತರವನ್ನು ಆರಿಸಿ :

| | *(i)* | *(ii)* | *(iii)* | *(iv)* |
|---|---|---|---|---|
| (1) | *(d)* | *(e)* | *(b)* | *(a)* |
| (2) | *(a)* | *(d)* | *(c)* | *(b)* |
| (3) | *(e)* | *(b)* | *(a)* | *(c)* |
| (4) | *(c)* | *(a)* | *(d)* | *(e)* |

**48.** ಈ ಕೆಳಗಿನ ಯಾವ ವಿಧಾನಗಳಲ್ಲಿ ಉಪರಾಷ್ಟ್ರಪತಿಗಳನ್ನು ತೆಗೆದುಹಾಕಬಹುದು?

(1) ರಾಜ್ಯಸಭೆಯ ನಿರ್ಣಯದಿಂದ ಬಹುಮತದಿಂದ ಅಂಗೀಕರಿಸಲ್ಪಟ್ಟಿದೆ ಮತ್ತು ಲೋಕಸಭೆಯು ಒಪ್ಪಿಗೆ ನೀಡಿದೆ

(2) ರಾಜ್ಯಸಭೆ ಮತ್ತು ಲೋಕಸಭೆಯ ನಿರ್ಣಯದ ಮೂಲಕ ಉಭಯ ಸದನಗಳಲ್ಲಿ ವಿಶೇಷ ಬಹುಮತದಿಂದ ಅಂಗೀಕರಿಸಲ್ಪಟ್ಟಿದೆ

(3) ಲೋಕಸಭೆಯ ನಿರ್ಣಯದ ಮೂಲಕ ವಿಶೇಷ ಬಹುಮತದಿಂದ ಅಂಗೀಕರಿಸಲ್ಪಟ್ಟಿದೆ ಮತ್ತು ರಾಜ್ಯಸಭೆಯು ಒಪ್ಪಿಗೆ ನೀಡಿದೆ

(4) ಸುಪ್ರೀಂ ಕೋರ್ಟ್‌ನ ವಿಚಾರಣೆಯ ನಂತರ ರಾಷ್ಟ್ರಪತಿಗಳ ಆದೇಶದ ಮೇರೆಗೆ

**49.** ಪಟ್ಟಿ *I* ರ ಜೊತೆ ಪಟ್ಟಿ *II* ನ್ನು ಹೊಂದಿಸಿ.

| ಪಟ್ಟಿ—*I* | ಪಟ್ಟಿ—*II* |
|---|---|
| *(i)* ಏಕರೂಪದ ನಾಗರಿಕ ಸಂಹಿತೆ | *(a)* ಅನುಚ್ಛೇದ 50 |
| *(ii)* ಗ್ರಾಮ ಪಂಚಾಯಿತಿ -ಗಳ ಸ್ಥಾಪನೆ | *(b)* ಅನುಚ್ಛೇದ 51 |
| *(iii)* ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು | *(c)* ಅನುಚ್ಛೇದ 40 |
| *(iv)* ಅಂತರರಾಷ್ಟ್ರೀಯ ಶಾಂತಿ ಮತ್ತು ಭದ್ರತೆಯನ್ನು ಕಾಪಾಡುವುದು | *(d)* ಅನುಚ್ಛೇದ 44 |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆಯ್ಕೆ ಮಾಡಿ :

| | *(i)* | *(ii)* | *(iii)* | *(iv)* |
|---|---|---|---|---|
| (1) | *(a)* | *(b)* | *(c)* | *(d)* |
| (2) | *(c)* | *(a)* | *(b)* | *(d)* |
| (3) | *(d)* | *(c)* | *(a)* | *(b)* |
| (4) | *(b)* | *(d)* | *(c)* | *(a)* |



Scanned with CamScanner

50. ಬುಡಕಟ್ಟು ಜನಾಂಗವನ್ನು, ಪರಿಶಿಷ್ಟ ಬುಡಕಟ್ಟು ಎಂದು ನಿರ್ದಿಷ್ಟಪಡಿಸಲು ಭಾರತೀಯ ಸಂವಿಧಾನವು ಈ ಕೆಳಗಿನ ಯಾರಿಗೆ ಅಧಿಕಾರ ನೀಡಿದೆ?

(1) ಭಾರತದ ರಾಷ್ಟ್ರಪತಿ

(2) ರಾಜ್ಯದ ಮುಖ್ಯಮಂತ್ರಿ

(3) ರಾಜ್ಯದ ರಾಜ್ಯಪಾಲರು

(4) ಜಿಲ್ಲಾ ಮ್ಯಾಜಿಸ್ಟ್ರೇಟ್

51. ಯಾವ ಗ್ರಾಮವು ಸೌರಶಕ್ತಿಯಿಂದ ಸಂಪುರ್ಣವಾಗಿ ಚಾಲಿತವಾಗಿ, ದೇಶದ ಮೊದಲ ಇಂಗಾಲ ತಟಸ್ಥ (ಮುಕ್ತ) ಪಂಚಾಯತ್ ಆಗಿದೆ?

(1) ಸಿರೋರ ಗ್ರಾಮ

(2) ಕಚಾಯಿ ಗ್ರಾಮ

(3) ಕುಂಬಳಂಗಿ ಗ್ರಾಮ

(4) ಪಲ್ಲಿ ಗ್ರಾಮ

52. 2021ರಲ್ಲಿ ಯುನೆಸ್ಕೊ (UNESCO) ಸಾಂಸ್ಕೃತಿಕ ವಿಭಾಗದ ವಿಶ್ವ ಪರಂಪರೆಯ ತಾಣಗಳ ಪಟ್ಟಿಯಲ್ಲಿ ______ ಮತ್ತು ______ ದೇವಾಲಯಗಳನ್ನು ಸೇರಿಸಲಾಗಿದೆ.

(1) ಧೋಳವೀರ ಮತ್ತು ರಾಮಪ್ಪ

(2) ಮಹಾಬೋಧಿ ಮತ್ತು ಮಹಾಲಕ್ಷ್ಮಿ

(3) ನಳಂದಾ ಮತ್ತು ನಂದಾ ದೇವಿ

(4) ಕೊನಾರ್ಕ್ ಮತ್ತು ಅಜಂತಾ

53. 1959 ರಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆ ಜಾರಿಗೆ ತಂದ ಎರಡು ರಾಜ್ಯಗಳು ಯಾವುವು?

(1) ರಾಜಸ್ಥಾನ ಮತ್ತು ಮಹಾರಾಷ್ಟ್ರ

(2) ರಾಜಸ್ಥಾನ ಮತ್ತು ಆಂಧ್ರಪ್ರದೇಶ

(3) ರಾಜಸ್ಥಾನ ಮತ್ತು ಒಡಿಶಾ

(4) ರಾಜಸ್ಥಾನ ಮತ್ತು ಪಂಜಾಬ್

54. ಭಾರತದ ಯಾವ ಮೊದಲನೇ ರಾಜ್ಯವು ಡಾ. ಬಿ. ಆರ್. ಅಂಬೇಡ್ಕರ್ ಅವರ ಜನ್ಮದಿನ ಏಪ್ರಿಲ್ 14ರಂದು 'ಸಮಾನತೆಯ ದಿನ'ವನ್ನಾಗಿ ಆಚರಿಸಲು ಘೋಷಿಸಿತು?

(1) ಮಹಾರಾಷ್ಟ್ರ

(2) ಹರಿಯಾಣ

(3) ತಮಿಳುನಾಡು

(4) ಒಡಿಶಾ

55. ಪಕ್ಷಾಂತರ ವಿರೋಧಿ ಕಾಯ್ದೆ ಎಂದು ಜನಪ್ರಿಯವಾಗಿ ಕರೆಯಲ್ಪಡುವ ಹತ್ತನೇ ಶೆಡ್ಯೂಲ್ ಅನ್ನು ಈ ಕೆಳಗಿನ ಯಾವ ತಿದ್ದುಪಡಿಗಳ ಮೂಲಕ ಸಂವಿಧಾನಕ್ಕೆ ಸೇರಿಸಲಾಗಿದೆ?

(1) 51ನೇ ತಿದ್ದುಪಡಿಗಳು

(2) 52ನೇ ತಿದ್ದುಪಡಿಗಳು

(3) 53ನೇ ತಿದ್ದುಪಡಿಗಳು

(4) 54ನೇ ತಿದ್ದುಪಡಿಗಳು



Scanned with CamScanner

56. 20 ಕ್ರಮಾಗತ ಬೆಸ ಸಂಖ್ಯೆಗಳ ಸರಾಸರಿ 36 ಆದರೆ ಅತಿ ಚಿಕ್ಕ ಸಂಖ್ಯೆಯನ್ನು ಕಂಡುಹಿಡಿಯಿರಿ.

(1) 11

(2) 13

(3) 17

(4) 19

57. ಈ ಸರಣಿಯನ್ನು ನೋಡಿ :

(1/4), (7/12), (11/12), (5/4), ... ಮುಂದಿನ ಸಂಖ್ಯೆ ಯಾವುದು?

(1) (3/4)

(2) (15/12)

(3) (19/12)

(4) (23/12)

58. 6 ಸೇಬು ಮತ್ತು 10 ಬಾಳೆಹಣ್ಣುಗಳ ಬೆಲೆ 78 ರೂ.ಗಳು, 8 ಸೇಬು ಮತ್ತು 5 ಬಾಳೆ ಹಣ್ಣುಗಳ ಬೆಲೆ 79 ರೂ.ಗಳು. ಹಾಗಾದರೆ 120 ರೂ.ಗಳಿಗೆ ಎಷ್ಟು ಸೇಬುಗಳನ್ನು ಕೊಳ್ಳಬಹುದು?

(1) 15

(2) 24

(3) 30

(4) 40

59. ಅಕ್ಷಾಂಶವನ್ನು ಆಧರಿಸಿ ಸಮಭಾಜಕ ವೃತ್ತದಿಂದ ಈ ನಗರಗಳನ್ನು ಏರಿಕೆ ಕ್ರಮದಲ್ಲಿ ಹೊಂದಿಸಿ.

*(i)* ಅಹ್ಮದಾಬಾದ್

*(ii)* ನಾಗಪುರ

*(iii)* ಇಂದೋರ್

*(iv)* ಸೂರತ್

*(v)* ಮುಂಬಯಿ

*(vi)* ಪುಣೆ

ಕೆಳಗಿನ ಕೋಡ್‌ಗಳನ್ನು ಬಳಸಿಕೊಂಡು ಸರಿಯಾದ ಉತ್ತರವನ್ನು ಆಯ್ಕೆಮಾಡಿ.

(1) *(i), (iii), (ii), (iv), (vi), (v)*

(2) *(i), (iii), (iv), (ii), (v), (vi)*

(3) *(vi), (v), (ii), (iv), (iii), (i)*

(4) *(v), (vi), (iv), (ii), (iii), (i)*



Scanned with CamScanner

60. ಪಟ್ಟಿ *I* ರ ಜೊತೆ ಪಟ್ಟಿ *II* ನ್ನು ಹೊಂದಿಸಿ:

| ಪಟ್ಟಿ—I | ಪಟ್ಟಿ—II |
|---|---|
| (i) ಕಾರವಾರ ಬಂದರು | (a) ಇದನ್ನು ಕಾಳಿನದಿಯ ಅಳಿವೆಯ ಬಳಿ ಅಭಿವೃದ್ಧಿಗೊಳಿಸಲಾಗಿದೆ |
| (ii) ಬೆಲಿಕೇರಿ ಬಂದರು | (b) ಇದು ಬಿಂಗೆ ಬೇ ಬಳಿ ನೆಲೆಗೊಂಡಿದೆ |
| (iii) ಭಟ್ಕಳ ಬಂದರು | (c) ಪ್ರಾಚೀನ ಕಾಲದಲ್ಲಿ ಇದು ವಿದೇಶಿ ವ್ಯಾಪಾರಕ್ಕೆ ಪ್ರಮುಖ ವ್ಯಾಪಾರ ಕೇಂದ್ರವಾಗಿತ್ತು |
| (iv) ಮಲ್ಪೆ ಬಂದರು | (d) ಇದು ಉದ್ಯಾವರ ನದಿಯ ಸಂಗಮದಲ್ಲಿರುವ ಸ್ವಾಭಾವಿಕ ಬಂದರಾಗಿದೆ |
| (v) ನವ ಮಂಗಳೂರು ಬಂದರು | (e) ಇದನ್ನು ಸರ್ವಋತು ಪ್ರಧಾನ ಬಂದರಾಗಿ ಅಭಿವೃದ್ಧಿಪಡಿಸಲಾಗಿದೆ |

ಕೆಳಗಿನ ಆಯ್ಕೆಗಳಿಂದ ಸರಿ ಉತ್ತರವನ್ನು ಆರಿಸಿ :

| | (i) | (ii) | (iii) | (iv) | (v) |
|---|---|---|---|---|---|
| (1) | (a) | (b) | (c) | (d) | (e) |
| (2) | (c) | (b) | (d) | (e) | (a) |
| (3) | (c) | (d) | (a) | (b) | (e) |
| (4) | (e) | (d) | (c) | (b) | (a) |

61. ಕೆಳಗಿನ ವಾಕ್ಯಗಳನ್ನು ಪರಿಶೀಲಿಸಿ ಸರಿಯಾದ ಉತ್ತರವನ್ನು ಕೊಟ್ಟಿರುವ ಸಂಕೇತಗಳಿಂದ ಆರಿಸಿ:

(i) ಜಂಬಿಟ್ಟಿಗೆ ಮಣ್ಣು (ಲ್ಯಾಟರೈಟ್ ಮಣ್ಣು) ಕರ್ನಾಟಕದ ಕೊಡಗು ಜಿಲ್ಲೆಯಿಂದ ಬೆಳಗಾವಿ ಜಿಲ್ಲೆಯವರೆಗೆ ಹಬ್ಬಿದೆ.

(ii) ಕರ್ನಾಟಕದ ಕಡಲ ತೀರದ ಮೆಕ್ಕಲು ಮಣ್ಣಿನಲ್ಲಿ ಮರಳಿನ ಪ್ರಮಾಣ ಅಧಿಕವಾಗಿದೆ.

(iii) ಕಪ್ಪು ಮಣ್ಣಿನಲ್ಲಿ ಮೆಗ್ನೀಶಿಯಮ್ ಕಡಿಮೆ ಇರುತ್ತದೆ ಆದರೆ ಸಾವಯವ ಅಂಶ ಹೆಚ್ಚು ಇರುತ್ತದೆ.

(iv) ಕಪ್ಪು ಮಿಶ್ರಿತ ಕೆಂಪು ಮಣ್ಣು ಉತ್ತರ ಕರ್ನಾಟಕದಲ್ಲಿ ಹೆಚ್ಚಾಗಿ ಕಂಡುಬರುತ್ತದೆ.

(1) (i), (ii) ಮತ್ತು (iii) ಸರಿಯಾಗಿವೆ

(2) (i), (ii) ಮತ್ತು (iv) ಸರಿಯಾಗಿವೆ

(3) (i), (iii) ಮತ್ತು (iv) ಸರಿಯಾಗಿವೆ

(4) ಮೇಲಿನ ಎಲ್ಲವೂ ಸರಿಯಾಗಿವೆ

62. ಭಾರತದ ಅತ್ಯಂತ ಬಿಸಿ ಪ್ರದೇಶ ಯಾವುದು ಮತ್ತು ಥಾರ್ ಮರುಭೂಮಿಯ ಹೆಬ್ಬಾಗಿಲು ಯಾವುದು?

(1) ಪಿಲಾನಿ

(2) ಬಿಕಾನೇರ್

(3) ಗಂಗಾನಗರ

(4) ಚುರು



Scanned with CamScanner

63. ರಾಷ್ಟ್ರೀಯ ಜಲ ಜಾಲದ ಪ್ರಕಾರ ಪ್ರಸ್ತಾವಿತ ನದಿ ಜೋಡಣೆ ಯೋಜನೆಗಳಲ್ಲಿ ಯಾವುದು ಸರಿಯಾದ ಜೋಡಿ?

(i) ಕೇನ್ ಮತ್ತು ಬಿತ್ವಾ ನದಿ

(ii) ಗಂಡಕ್ ಮತ್ತು ಗಂಗಾ ನದಿ

(iii) ಗೋದಾವರಿ ಮತ್ತು ನರ್ಮದಾ ನದಿ

(iv) ಕಾವೇರಿ ಮತ್ತು ವೈಗೈ ನದಿ

ಕೆಳಗಿನ ಆಯ್ಕೆಗಳಿಂದ ಸರಿ ಉತ್ತರವನ್ನು ಆರಿಸಿ :

(1) *(i)*, *(ii)* ಮತ್ತು *(iii)*

(2) *(ii)*, *(iii)* ಮತ್ತು *(iv)*

(3) *(iii)*, *(iv)* ಮತ್ತು *(i)*

(4) *(i)*, *(ii)* ಮತ್ತು *(iv)*

64. ಕರ್ನಾಟಕದ ಪುರಾತನ ಶಿಲೆಗಳು ಈ ಗುಂಪಿಗೆ ಸೇರಿವೆ

(1) ಭೀಮ

(2) ಬಾದಾಮಿ

(3) ಸರಗೂರು

(4) ಕಲ್ಲಡ್ಗಿ

65. ಕರ್ನಾಟಕದಲ್ಲಿನ ರಾಷ್ಟ್ರೀಯ ಉದ್ಯಾನವನಗಳನ್ನು ಅವುಗಳ ಭೌಗೋಳಿಕ ಕ್ಷೇತ್ರಕ್ಕನುಗುಣವಾಗಿ ಇಳಿಕೆ ಕ್ರಮದಲ್ಲಿ ಬರೆಯಿರಿ :

(1) ನಾಗರಹೊಳೆ, ಕುದುರೆಮುಖ, ಬಂಡಿಪುರ, ಆನ್ಷಿ

(2) ಕುದುರೆಮುಖ, ಆನ್ಷಿ, ನಾಗರಹೊಳೆ, ಬಂಡಿಪುರ

(3) ಬಂಡಿಪುರ, ನಾಗರಹೊಳೆ, ಆನ್ಷಿ, ಕುದುರೆಮುಖ

(4) ಬಂಡಿಪುರ, ನಾಗರಹೊಳೆ, ಕುದುರೆಮುಖ, ಆನ್ಷಿ

66. ಕಾಮನ್‌ವೆಲ್ತ್ ಗೇಮ್ 2022ರ ಸಮಾರೋಪ ಸಮಾರಂಭದಲ್ಲಿ ಯಾವ ಆಟಗಾರರು ಧ್ವಜಧಾರಿಯಾಗಿ ಭಾರತವನ್ನು ಪ್ರತಿನಿಧಿಸಿದರು?

(1) ಅಮಿತ್ ಪಂಗಲ್ ಮತ್ತು ಮೀರಾಬಾಯಿ ಚಾನು

(2) ನಿಖತ್ ಜರೀನ್ ಮತ್ತು ಅಚಂತ ಶರತ್ ಕಮಲ್

(3) ಲಕ್ಷ್ಯ ಸೇನ್ ಮತ್ತು ವೀರೇಶ್ ಫಗತ್

(4) ಭಾವಿನ ಪಟೇಲ್ ಮತ್ತು ಚಿರಾಗ್ ಶೆಟ್ಟಿ

67. ವಿಶ್ವ ವಲಸಿಗ ಪಕ್ಷಿ ದಿನ 2022ರ ಧ್ಯೇಯವಾಕ್ಯ ಯಾವುದು?

(1) ಬೆಳಕು ಮಾಲಿನ್ಯ

(2) ಪಕ್ಷಿಗಳು ನಮ್ಮ ಜಗತ್ತನ್ನು ಸಂಪರ್ಕಿಸುತ್ತವೆ

(3) ಪಕ್ಷಿಗಳ ಸಂರಕ್ಷಣೆಗಾಗಿ ನಮ್ಮ ಕೂಗನ್ನು ಒಟ್ಟುಗೂಡಿಸುವುದು

(4) ಹಕ್ಕಿಯಂತೆ ಹಾಡು, ಹಾರು, ತೇಲಾಡು

68. ಸೌರ್ಯ-ಸ್ಥಿರವನ್ನು ನಿರ್ಧರಿಸಲು ಬಳಸುವ ಉಪಕರಣಗಳನ್ನು ಕರೆಯಲಾಗುತ್ತದೆ

(1) ಬೋಲೋಮೀಟರ್

(2) ರೇಡಿಯೋಮೀಟರ್

(3) ಪೈರ್‌ಹೆಲಿಮೀಟರ್

(4) ಮೋನೋಮೀಟರ್



Scanned with CamScanner

69. ಒಂದು NOR ಗೇಟಿನ ಭುಕ್ತಗಳು 0 ಮತ್ತು 0 ಆಗಿದ್ದಾಗ, ನಿರ್ಗತವು

(1) 0

(2) 1

(3) 2

(4) 3

70. ಈ ಕೆಳಕಂಡವುಗಳಲ್ಲಿ ಯಾವುದು ಸರಿಯಾಗಿದೆ?

*(i)* ಮ್ಯಾಗ್ನೆಟಿಕ್ ಅನುರಣನೆ ಬಿಂಬವು (MRI) ನ್ಯೂಕ್ಲಿಯರ್ ಮ್ಯಾಗ್ನೆಟಿಕ್ ಅನುರಣನೆಯ ವಿದ್ಯಮಾನದ ಮೇಲೆ ಅವಲಂಬಿತವಾಗಿದೆ.

*(ii)* ನಿರ್ವಾತದಲ್ಲಿ ಬೆಳಕಿನ ವೇಗವು ಮೂಲಕ್ಕೆ ಸಂಬಂಧಿಸಿದ ಅವುಗಳ ಚಲನೆಯನ್ನು ಗಮನಿಸದೆ ಎಲ್ಲಾ ವೀಕ್ಷಣೆಗಳಿಗೆ ಒಂದೇ ಆಗಿರುತ್ತದೆ.

*(iii)* ಎಕ್ಸ್-ಕಿರಣವು ಒಂದು ಎಲೆಕ್ಟ್ರೋ ಮ್ಯಾಗ್ನೆಟಿಕ್ ವಿಕಿರಣವಾಗಿದೆ.

*(iv)* ಎಕ್ಸ್-ಕಿರಣದ ತರಂಗದೂರವು ಸೂಕ್ಷ್ಮ ತರಂಗದ ತರಂಗದೂರಕ್ಕಿಂತ ಚಿಕ್ಕದಾಗಿದೆ.

(1) *(i)* ಮಾತ್ರ *(iv)* ಸರಿಯಾಗಿವೆ

(2) *(i)* ಮಾತ್ರ *(ii)* ಸರಿಯಾಗಿವೆ

(3) *(i)* ಮಾತ್ರ *(iii)* ಸರಿಯಾಗಿವೆ

(4) ಎಲ್ಲವೂ ಸರಿಯಾಗಿವೆ

71. ಥರ್ಮೋ ಎಲೆಕ್ಟ್ರಿಕ್ ಕೂಲರ್‌ಗಳು _____ ಮೇಲೆ ಅವಲಂಬಿತವಾಗಿವೆ.

(1) ಜೂಲ್ ಪರಿಣಾಮ

(2) ಸೀಬ್ಯಾಕ್ ಪರಿಣಾಮ

(3) ಪೆಲ್ಟಿಯರ್ ಪರಿಣಾಮ

(4) ಇವು ಯಾವುದೂ ಅಲ್ಲ

72. ಉಚ್ಚ ಅಧಿವಾಹಕಗಳು _____ ವಸ್ತುಗಳಾಗಿವೆ.

(1) ಯಾವುದೇ ರೋಧಕವಿಲ್ಲದೆ ವಿದ್ಯುತ್‌ಚ್ಛಕ್ತಿಯನ್ನು ವಹನಿಸುವ ವಸ್ತು

(2) ಸಣ್ಣ ರೋಧಕದಿಂದ ವಿದ್ಯುತ್‌ಚ್ಛಕ್ತಿಯನ್ನು ವಹನಿಸುವ ವಸ್ತು

(3) ಅನಂತ ರೋಧಕ ಇರುವ ಎಲೆಕ್ಟ್ರಿಕಲ್ ರೋಧಕ ಇರುವ ವಸ್ತು

(4) ಸೀಮಿತ ಎಲೆಕ್ಟ್ರಿಕಲ್ ರೋಧಕ ಇರುವ ವಸ್ತು

73. ಕರ್ನಾಟಕ ರೈತ ಸುರಕ್ಷಾ ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯು

(1) ಕರ್ನಾಟಕ ರಾಜ್ಯದಲ್ಲಿ 2015-16ರಿಂದ ಮಣ್ಣು ಆರೋಗ್ಯ ಮಿಷನ್ ಕಾರ್ಯಕ್ರಮದ ಅಡಿಯಲ್ಲಿ ಪ್ರಾರಂಭಿಸಲಾಯಿತು.

(2) ರಾಜ್ಯದಲ್ಲಿ ಕೃಷಿ ಯಾಂತ್ರೀಕರಣದ ಭಾಗವಾಗಿ ಈ ಯೋಜನೆಯನ್ನು ಪ್ರಾರಂಭಿಸಲಾಯಿತು.

(3) ಈ ಯೋಜನೆಯನ್ನು ರೈತರ ತಲಾ ಉತ್ಪನ್ನವನ್ನು ಹೆಚ್ಚಿಸುವ ಸಲುವಾಗಿ ಪ್ರಾರಂಭಿಸಲಾಯಿತು.

(4) ಇದೊಂದು 'ಬೆಳೆ ವಿಮೆ' ಯೋಜನೆಯಾಗಿದೆ.



Scanned with CamScanner

74. ಜನವರಿ 10, 2023ರಂದು ನಿಧನ ಹೊಂದಿದ ಕನ್ನಡದ ಖ್ಯಾತ ಬರಹಗಾರ್ತಿ ಸಾರಾ ಅಬೂಬಕ್ಕರ್ ಅವರು ತಮ್ಮ ಈ ಕೆಳಗಿನ ಯಾವ ಕಾದಂಬರಿಯಿಂದ ಖ್ಯಾತರಾಗಿದ್ದರು?

(1) ಮೂಕಜ್ಜಿಯ ಕನಸುಗಳು

(2) ಚಂದ್ರಗಿರಿಯ ತೀರದಲ್ಲಿ

(3) ಮಹಿಳೆ ಮತ್ತು ಸಂಪ್ರದಾಯ

(4) ಮಹಿಳೆ ಮತ್ತು ಸಮಾಜ

75. ಕರ್ನಾಟಕ ಸರಕಾರದಲ್ಲಿ 'ಕರ್ನಾಟಕ ಭೂ ಕಂದಾಯ ಕಾಯ್ದೆ ಎರಡನೇ ತಿದ್ದುಪಡಿಯನ್ನು ವಿಧಾನಸಭೆಯಲ್ಲಿ ದಿನಾಂಕ 22 ಡಿಸೆಂಬರ್ 2022ರಂದು ಅನುಮೋದಿಸಿ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕೆ ಪರಿವರ್ತಿಸಲು ತೆಗೆದುಕೊಳ್ಳಲು ಬೇಕಾದ ಕನಿಷ್ಠ ದಿನಗಳು

(1) 15 ದಿನಗಳು

(2) 30 ದಿನಗಳು

(3) 7 ದಿನಗಳು

(4) 45 ದಿನಗಳು

76. ಭಾರತದ ರಕ್ಷಣಾಪಡೆಗಳ ದ್ವಿತೀಯ ಮುಖ್ಯಸ್ಥರಾಗಿ ಇತ್ತೀಚೆಗೆ ನೇಮಕಗೊಂಡವರು

(1) ಲೆಫ್ಟಿನೆಂಟ್ ಜನರಲ್ ಅನಿಲ್ ಚೌಹಾನ್ (ನಿವೃತ್ತ)

(2) ಡೈರೆಕ್ಟರ್ ಜನರಲ್ ವಿ.ಎಸ್. ಪಠಾನಿಯಾ

(3) ಜನರಲ್ ಬಿಪಿನ್ ರಾವತ್

(4) ಲೆಫ್ಟಿನೆಂಟ್ ಜನರಲ್ ಮನೋಜ್ ಪಾಂಡೆ

77. 'ಜಿ-20' ಅಥವಾ 'ಇಪ್ಪತ್ತರ ಗುಂಪು' ಎಂದು ಕರೆಯಲ್ಪಡುವ ಅಂತರ್‌ಸರಕಾರಗಳ ಒಕ್ಕೂಟವು ಈ ಕೆಳಗಿನ ಯಾವ ಗುಂಪನ್ನು ಪ್ರತಿನಿಧಿಸುತ್ತದೆ?

(1) ಜಗತ್ತಿನ 19 ರಾಷ್ಟ್ರಗಳು ಹಾಗೂ ಯೂರೋಪಿಯನ್ ಒಕ್ಕೂಟ

(2) ಜಗತ್ತಿನ 20 ಅಭಿವೃದ್ಧಿ ಹೊಂದುತ್ತಿರುವ ರಾಷ್ಟ್ರಗಳು

(3) ಜಗತ್ತಿನ 20 ಅಭಿವೃದ್ಧಿ ಹೊಂದುತ್ತಿರುವ ಮತ್ತು ಹೊಂದಿದ ರಾಷ್ಟ್ರಗಳು

(4) ಜಗತ್ತಿನ 19 ರಾಷ್ಟ್ರಗಳು ಹಾಗೂ G8 ರಾಷ್ಟ್ರಗಳು

78. ಕರ್ನಾಟಕ ರಾಜ್ಯವು ಡಿಸೆಂಬರ್ 2022ರಲ್ಲಿ ಸಂಗ್ರಹಿಸಿದ ಒಟ್ಟು GST (ಸೇವೆ ಮತ್ತು ಸರಕು ತೆರಿಗೆ) ಮೊತ್ತವು

(1) ರೂ. 10,061 ಕೋಟಿಗಳು

(2) ರೂ. 23,598 ಕೋಟಿಗಳು

(3) ರೂ. 9,238 ಕೋಟಿಗಳು

(4) ರೂ. 11,780 ಕೋಟಿಗಳು

79. ದಿನಾಂಕ 24, ಮೇ 2022ರಂದು ಜಪಾನಿನ ಟೋಕಿಯೋದಲ್ಲಿ ಜರುಗಿದ ಕ್ವಾಡ್ ಸಮ್ಮೇಳನ, 2022 (Quad Summit)ದಲ್ಲಿ ಭಾಗವಹಿಸಿದ ರಾಷ್ಟ್ರಗಳು

(1) ಚೀನಾ, ಆಸ್ಟ್ರೇಲಿಯಾ, ಪಾಕಿಸ್ತಾನ್ ಮತ್ತು ಯುಎಸ್‌ಎ

(2) ಭಾರತ, ಯುಎಸ್‌ಎ, ಜಪಾನ್ ಮತ್ತು ಆಸ್ಟ್ರೇಲಿಯಾ

(3) ಭಾರತ, ಚೀನಾ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾ

(4) ಭಾರತ, ರಷ್ಯಾ, ಚೀನಾ ಮತ್ತು ದಕ್ಷಿಣ ಆಫ್ರಿಕಾ



Scanned with CamScanner

80. ಕರ್ನಾಟಕ ಸರಕಾರವು 2022ರ ನವೆಂಬರ್ ತಿಂಗಳಲ್ಲಿ ಜಾರಿಗೊಳಿಸಿದ 'ವಿವೇಕ' ಯೋಜನೆಯ ಮುಖ್ಯ ಉದ್ದೇಶವೆಂದರೆ

(1) ಶಾಲೆ ಹಾಗೂ ಕಾಲೇಜುಗಳಲ್ಲಿ 'ನೈತಿಕ ಮೌಲ್ಯ'ಗಳ ಬೋಧನೆಯನ್ನು ಪರಿಚಯಿಸುವುದು

(2) ಹಳೆಯ ಮತ್ತು ಶಿಥಿಲಾವಸ್ಥೆಯಲ್ಲಿರುವ ತರಗತಿಗಳನ್ನು ಬದಲಿಸುವುದು

(3) ಶಾಲೆ ಮತ್ತು ಕಾಲೇಜುಗಳಲ್ಲಿ 'ಯೋಗ' ಮತ್ತು 'ಪ್ರಾಣಾಯಾಮ'ವನ್ನು ಪರಿಚಯಿಸುವುದು

(4) ಶಾಲಾ ಮಟ್ಟದಲ್ಲಿ ಸ್ವಾಮಿ ವಿವೇಕಾನಂದರ ಬೋಧನೆಗಳನ್ನು ಪರಿಚಯಿಸುವುದು

81. ಗೌರವಾನ್ವಿತ ಭಾರತದ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮುರವರು

(1) ಒರಿಸ್ಸಾ ರಾಜ್ಯದ ನಬರಂಗಾಪುರ ಜಿಲ್ಲೆಗೆ ಸೇರಿದವರಾಗಿದ್ದಾರೆ.

(2) ಒರಿಸ್ಸಾ ರಾಜ್ಯದ ಕೆಯಾಂಜರ್ ಜಿಲ್ಲೆಗೆ ಸೇರಿದವರಾಗಿದ್ದಾರೆ.

(3) ಒರಿಸ್ಸಾ ರಾಜ್ಯದ ಮಯೂರ್‌ಭಂಜ್ ಜಿಲ್ಲೆಗೆ ಸೇರಿದವರಾಗಿದ್ದಾರೆ.

(4) ಒರಿಸ್ಸಾ ರಾಜ್ಯದ ರಾಯಘಡ್ ಜಿಲ್ಲೆಗೆ ಸೇರಿದವರಾಗಿದ್ದಾರೆ.

82. ಈ ಕೆಳಗಿನ ಯಾವ ಮಣ್ಣು ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶದಲ್ಲಿ ಕಂಡುಬರುತ್ತದೆ?

(1) ಮೆಕ್ಕಲು ಮಣ್ಣು

(2) ಜಂಬಿಟ್ಟಿಗೆ ಮಣ್ಣು

(3) ಕಪ್ಪು ಮಣ್ಣು

(4) ಕೆಂಪು ಮಣ್ಣು

83. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

**ಸಮರ್ಥನೆ :** ಮ್ಯಾಂಗ್ರೋವ್ ಸಸ್ಯವರ್ಗವು ಕರ್ನಾಟಕದ ಕರಾವಳಿ ಪ್ರದೇಶದಲ್ಲಿ ವೇಗವಾಗಿ ಬೀಸುವ ಮಾನ್ಸೂನ್ ಮಾರುತಗಳು ಮತ್ತು ಚಂಡಮಾರುತಗಳ ವಿರುದ್ಧ ಸದೃಢವಾಗಿ ನಿಲ್ಲಲು ಸಾಧ್ಯವಾಗುವುದಿಲ್ಲ.

**ಕಾರಣ :** ಈ ಮೇಲಿನ ಗುಣಲಕ್ಷಣದಿಂದಾಗಿ ಈಗ ಕರಾವಳಿ ಪ್ರದೇಶದಲ್ಲಿ ಸಮುದ್ರದ ಅಲೆಗಳಿಂದಾಗುವ ಸವೆತವನ್ನು ತಡೆಗಟ್ಟಲು ಹೆಚ್ಚಿನ ಮ್ಯಾಂಗ್ರೋವ್ ಸಸ್ಯಗಳನ್ನು ನೆಡಲು ಪ್ರಯತ್ನಿಸಲಾಗಿದೆ.

(1) ಸಮರ್ಥನೆ ಮತ್ತು ಕಾರಣ ಎರಡೂ ಸರಿಯಾಗಿವೆ ಮತ್ತು ಸಮರ್ಥನೆಗೆ ಕಾರಣ ಸರಿಯಾದ ವಿವರಣೆಯಾಗಿದೆ.

(2) ಸಮರ್ಥನೆ ಮತ್ತು ಕಾರಣ ಎರಡೂ ಸರಿಯಾಗಿವೆ ಆದರೆ ಸಮರ್ಥನೆಗೆ ಕಾರಣ ಸರಿಯಾದ ವಿವರಣೆಯಲ್ಲ.

(3) ಸಮರ್ಥನೆ ಸರಿಯಾಗಿದೆ ಆದರೆ ಕಾರಣ ತಪ್ಪಾಗಿದೆ.

(4) ಸಮರ್ಥನೆ ಮತ್ತು ಕಾರಣ ಎರಡೂ ತಪ್ಪಾಗಿವೆ.

84. ಕರ್ನಾಟಕದ ಕೆಳಗಿನ ಯಾವ ಜಿಲ್ಲೆ ಕಡಿಮೆ ಅರಣ್ಯ ಪ್ರದೇಶವನ್ನು ಹೊಂದಿದೆ?

(1) ಧಾರವಾಡ

(2) ಚಾಮರಾಜನಗರ

(3) ಬೆಳಗಾವಿ

(4) ಶಿವಮೊಗ್ಗ



Scanned with CamScanner

**85.** ಕೃಷ್ಣಾ ಮೇಲ್ದಂಡೆ ಯೋಜನೆ (UKP) ಕೆಳಗಿನ ಯಾವ ಜಿಲ್ಲೆಗಳಿಗೆ ಪ್ರಯೋಜನಕಾರಿಯಾಗಿಲ್ಲ?

(1) ಗುಲ್ಬರ್ಗ

(2) ಬಿಜಾಪುರ

(3) ಬಳ್ಳಾರಿ

(4) ಬಾಗಲಕೋಟೆ

**86.** ಕರ್ನಾಟಕದ ವಿದ್ಯುತ್ ಉತ್ಪಾದನೆಯನ್ನು ಕುರಿತು ಈ ಕೆಳಗಿನ ಯಾವ ಹೇಳಿಕೆಗಳು ಸರಿಯಾಗಿವೆ?

*(i)* ಕಾಳಿ ನದಿ ಕಣಿವೆಗೆ ಹೋಲಿಸಿದರೆ ಕಾವೇರಿ ನದಿ ಕಣಿವೆಯಲ್ಲಿ ಉತ್ಪಾದನೆಯಾಗುವ ವಿದ್ಯುತ್ ತುಂಬಾ ಕಡಿಮೆ.

*(ii)* ಶಿವನಸಮುದ್ರ ಮತ್ತು ಶಿಂಷಾ, ಕಾವೇರಿ ನದಿ ಕಣಿವೆಯಲ್ಲಿ ವಿದ್ಯುತ್ ಉತ್ಪಾದಿಸುವ ಜಲವಿದ್ಯುತ್ ಯೋಜನೆಗಳು.

*(iii)* ಸುಪಾ, ನಾಗಝರಿ, ಕೊಡಸಳ್ಳಿ ಮತ್ತು ಕದ್ರಾ, ಕಾಳಿ ನದಿ ಕಣಿವೆಯಲ್ಲಿ ವಿದ್ಯುತ್ ಉತ್ಪಾದಿಸುವ ಜಲವಿದ್ಯುತ್ ವಿದ್ಯುತ್ ಯೋಜನೆಯಾಗಿವೆ.

*(iv)* ಕಾಳಿ ನದಿಯು ಕರ್ನಾಟಕದಲ್ಲಿ ಜಲವಿದ್ಯುತ್ ಉತ್ಪಾದನೆಯ ಎರಡನೇ ಅತಿ ದೊಡ್ಡ ನದಿ ಕಣಿವೆ ಪ್ರದೇಶವಾಗಿದೆ.

(1) *(i)*, *(iii)* ಮತ್ತು *(iv)* ಸರಿಯಾಗಿವೆ

(2) *(ii)*, *(iii)* ಮತ್ತು *(iv)* ಸರಿಯಾಗಿವೆ

(3) *(i)*, *(ii)* ಮತ್ತು *(iii)* ಸರಿಯಾಗಿವೆ

(4) ಎಲ್ಲಾ ಸರಿಯಾಗಿವೆ

**87.** ಕೆಳಗಿನ ಐತಿಹಾಸಿಕ ಸ್ಥಳಗಳನ್ನು ಪರಿಗಣಿಸಿ.

*(i)* ಹರಪ್ಪ

*(ii)* ಲೊಥಾಲ್

*(iii)* ಸನ್ನತಿ

*(iv)* ಕಾಲಿಬಂಗನ್

*(v)* ಚಂದ್ರವಳ್ಳಿ

ಮೇಲ್ಕಂಡ ಯಾವ ಐತಿಹಾಸಿಕ ಸ್ಥಳಗಳು ಸಿಂಧೂ ಬಯಲಿನ ನಾಗರಿಕತೆಗೆ ಸರಿಹೊಂದುತ್ತವೆ?

(1) *(i)*, *(ii)* ಮತ್ತು *(iv)* ಮಾತ್ರ

(2) *(i)*, *(iii)* ಮತ್ತು *(v)* ಮಾತ್ರ

(3) *(i)*, *(ii)* ಮತ್ತು *(iii)* ಮಾತ್ರ

(4) *(ii)*, *(iii)* ಮತ್ತು *(iv)* ಮಾತ್ರ

**88.** ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

*(i)* ಋಗ್ವೇದ ಕಾಲದಲ್ಲಿ ಜನರು ಪ್ರಕೃತಿಯನ್ನು ದೇವರೆಂದು ಪೂಜಿಸುತ್ತಿದ್ದರು.

*(ii)* ಋಗ್ವೇದ ಕಾಲದಲ್ಲಿ ಸ್ತ್ರೀಯರಿಗೆ ಧಾರ್ಮಿಕ ಸ್ವಾತಂತ್ರ್ಯವನ್ನು ನೀಡಲಾಗಿತ್ತು.

ಮೇಲ್ಕಂಡ ಯಾವ ಹೇಳಿಕೆಗಳು ಸರಿಯಾಗಿವೆ?

(1) *(i)* ಮತ್ತು *(ii)* ಎರಡೂ ಸರಿ

(2) *(i)* ಮತ್ತು *(ii)* ಎರಡೂ ತಪ್ಪು

(3) *(i)* ತಪ್ಪು ಮತ್ತು *(ii)* ಸರಿ

(4) *(ii)* ತಪ್ಪು ಮತ್ತು *(i)* ಸರಿ



Scanned with CamScanner

89. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

*(i)* ಎರಡನೆಯ ಬೌದ್ಧ ಸಮ್ಮೇಳನ ವೈಶಾಲಿಯಲ್ಲಿ ನಡೆಯಿತು.

*(ii)* ಈ ಬೌದ್ಧ ಸಮ್ಮೇಳನವನ್ನು ಮೌರ್ಯ ಚಕ್ರವರ್ತಿ ಅಶೋಕನು ಏರ್ಪಡಿಸಿದ್ದನು.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) *(i)* ಮತ್ತು *(ii)* ಎರಡೂ ಸರಿ

(2) *(i)* ಸರಿ ಆದರೆ *(ii)* ತಪ್ಪು

(3) *(ii)* ಸರಿ ಆದರೆ *(i)* ತಪ್ಪು

(4) *(i)* ಮತ್ತು *(ii)* ಎರಡೂ ತಪ್ಪು

90. ಪಟ್ಟಿ-Iನ್ನು ಪಟ್ಟಿ-IIರೊಂದಿಗೆ ಹೊಂದಿಸಿರಿ:

| ಪಟ್ಟಿ—I<br>ಪ್ರವಾಸಿಗರು / ಇತಿಹಾಸಕಾರರು | ಪಟ್ಟಿ—II<br>ರಾಷ್ಟ್ರ |
|---|---|
| *(i)* ಮೆಗಾಸ್ತನೀಸ್ | *(a)* ಪೋರ್ಚುಗೀಸ್ |
| *(ii)* ಫಾ-ಹಿಯಾನ್ | *(b)* ಇರಾನ್ |
| *(iii)* ಅಲ್-ಬರೂನಿ | *(c)* ಗ್ರೀಕ್ |
| *(iv)* ಫರ್ನೋ-ನ್ಯೂನಿಚ್ | *(d)* ಚೀನಾ |
| | *(e)* ಇಟಲಿ |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆರಿಸಿ :

| | *(i)* | *(ii)* | *(iii)* | *(iv)* |
|---|---|---|---|---|
| (1) | *(b)* | *(a)* | *(c)* | *(d)* |
| (2) | *(c)* | *(e)* | *(b)* | *(a)* |
| (3) | *(c)* | *(d)* | *(b)* | *(a)* |
| (4) | *(d)* | *(b)* | *(a)* | *(c)* |

91. ಈ ಕೆಳಕಂಡ ಯಾವ ಎರಡು (ಜೋಡಿಗಳು) ಸರಿಯಾಗಿ ಹೊಂದುತ್ತವೆ?

| ಪಟ್ಟಿ—I<br>ವಿದ್ವಾಂಸರು | ಪಟ್ಟಿ—II<br>ಗ್ರಂಥಗಳು |
|---|---|
| *(i)* ಹ್ಯೂಯೆನ್‌ತ್ಸಾಂಗ್ | — ಸಿ.ಯು.ಕಿ. (Si-Yu-ki) |
| *(ii)* ಕಲ್ಹಣ | — ಹರ್ಷ ಚರಿತೆ |
| *(iii)* ಕೌಟಿಲ್ಯ | — ಅರ್ಥಶಾಸ್ತ್ರ |
| *(iv)* ಮೆಗಾಸ್ತನೀಸ್ | — ಭೂಗೋಳಶಾಸ್ತ್ರ |

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) *(i)* ಮತ್ತು *(iii)* ಮಾತ್ರ

(2) *(ii)* ಮತ್ತು *(iv)* ಮಾತ್ರ

(3) *(i)* ಮತ್ತು *(ii)* ಮಾತ್ರ

(4) *(iii)* ಮತ್ತು *(iv)* ಮಾತ್ರ

92. ಈ ಕೆಳಕಂಡ ಯಾವ ಎರಡು (ಜೋಡಿಗಳು) ಸರಿಯಾಗಿ ಹೊಂದುತ್ತವೆ?

| ಸುಧಾರಕರು | ತತ್ವಶಾಸ್ತ್ರ / ವೇದಾಂತ |
|---|---|
| *(i)* ಶ್ರೀ ಶಂಕರಾಚಾರ್ಯರು | — ಅದ್ವೈತ ವೇದಾಂತ |
| *(ii)* ಶ್ರೀ ಮಧ್ವಾಚಾರ್ಯರು | — ಶಕ್ತಿ ವಿಶಿಷ್ಟಾದ್ವೈತ ವೇದಾಂತ |
| *(iii)* ಶ್ರೀ ರಾಮಾನುಜಾಚಾರ್ಯರು | — ವಿಶಿಷ್ಟಾದ್ವೈತ ವೇದಾಂತ |

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತವನ್ನಾರಿಸಿ :

(1) *(i)* ಮಾತ್ರ

(2) *(ii)* ಮತ್ತು *(iii)* ಮಾತ್ರ

(3) *(i)* ಮತ್ತು *(iii)* ಮಾತ್ರ

(4) *(i)* ಮತ್ತು *(ii)* ಮಾತ್ರ



Scanned with CamScanner

93. ಪಟ್ಟಿ-Iರಲ್ಲಿನ ಕದನಗಳನ್ನು ಪಟ್ಟಿ-IIರಲ್ಲಿನ ನಡೆದ ವರ್ಷಗಳೊಂದಿಗೆ ಹೊಂದಿಸಿರಿ :

| ಪಟ್ಟಿ—I<br>ಕದನಗಳು | ಪಟ್ಟಿ—II<br>ವರ್ಷಗಳು |
|---|---|
| *(i)* ದ್ವಿತೀಯ ಪಾಣಿಪತ್ ಕದನ | *(a)* 1539 |
| *(ii)* ಚೌಸಾ ಕದನ | *(b)* 1540 |
| *(iii)* ಚಾಂದೇರಿ ಕದನ | *(c)* 1556 |
| *(iv)* ಕನೂಜ್ ಕದನ | *(d)* 1528 |
| | *(e)* 1526 |

ಸಂಕೇತಗಳ ಸಹಾಯದಿಂದ ಸರಿ ಉತ್ತರಗಳನ್ನು ಆಯ್ಕೆ ಮಾಡಿ :

| | *(i)* | *(ii)* | *(iii)* | *(iv)* |
|---|---|---|---|---|
| (1) | *(a)* | *(b)* | *(c)* | *(e)* |
| (2) | *(c)* | *(d)* | *(e)* | *(b)* |
| (3) | *(b)* | *(c)* | *(d)* | *(e)* |
| (4) | *(c)* | *(a)* | *(d)* | *(b)* |

94. ಈ ಕೆಳಕಂಡ ಯಾವ ಎರಡು (ಜೋಡಿಗಳು) ಸರಿಯಾಗಿ ಹೊಂದುತ್ತವೆ?

| ಕವಿಗಳು/ವಿದ್ವಾಂಸರು | ಗ್ರಂಥಗಳು |
|---|---|
| *(i)* ಗುಲ್‌ಬದನ್ ಬೇಗಂ | – ಹುಮಾಯೂನ್ ನಾಮಾ |
| *(ii)* ನಿಜಾಮುದ್ದೀನ್ ಅಹ್ಮದ್ | – ಮಾಸಿರ್-ಎ-ಅಲಂಗೀರ್ |
| *(iii)* ಅಬುಲ್ ಫಜಲ್ | – ಐನ್-ಐ-ಅಕ್ಬರಿ |
| *(iv)* ಬದ್‌ನಿ | – ತುಜುಕ್-ಐ-ಜಹಾಂಗೀರ್ |

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತಗಳನ್ನಾರಿಸಿ :

(1) *(i)* ಮತ್ತು *(ii)* ಮಾತ್ರ

(2) *(i)* ಮತ್ತು *(iii)* ಮಾತ್ರ

(3) *(ii)* ಮತ್ತು *(iv)* ಮಾತ್ರ

(4) *(iii)* ಮತ್ತು *(iv)* ಮಾತ್ರ

95. ಕೆಳಗಿನ ಹೇಳಿಕೆಗಳನ್ನು ಪರಿಗಣಿಸಿ :

*(i)* 1773ರ ರೆಗ್ಯುಲೇಟಿಂಗ್ ಕಾಯ್ದೆ ಭಾರತದಲ್ಲಿ ಈಸ್ಟ್ ಇಂಡಿಯಾ ಕಂಪನಿಯಲ್ಲಿನ ಪ್ರಥಮ ಸಂವಿಧಾನಾತ್ಮಕ ಕಾಯ್ದೆಯಾಗಿದೆ.

*(ii)* ಈ ಕಾಯ್ದೆಯ ಪ್ರಕಾರ ಬಂಗಾಳದ ಗವರ್ನರ್ ಬಂಗಾಳದ ಈಸ್ಟ್ ಇಂಡಿಯಾ ಕಂಪನಿಯ ಗವರ್ನರ್-ಜನರಲ್ ಆದನು.

*(iii)* ಈ ಕಾಯ್ದೆಯನ್ವಯ ವಾರನ್ ಹೇಸ್ಟಿಂಗ್ಸ್ ಬಂಗಾಳದ ಪ್ರಥಮ ಗವರ್ನರ್-ಜನರಲ್ ಆದನು.

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತಗಳನ್ನಾರಿಸಿ :

(1) *(i)*, *(ii)* ಮತ್ತು *(iii)* ಎಲ್ಲವೂ ಸರಿ

(2) *(i)* ಮತ್ತು *(ii)* ಸರಿ ಆದರೆ *(iii)* ತಪ್ಪು

(3) *(ii)* ಮತ್ತು *(iii)* ಸರಿ ಆದರೆ *(i)* ತಪ್ಪು

(4) *(i)*, *(ii)* ಮತ್ತು *(iii)* ಎಲ್ಲವೂ ತಪ್ಪು



Scanned with CamScanner

96. ಭಾರತದ ಸ್ವಾತಂತ್ರ್ಯ ಚಳುವಳಿಗೆ ಸಂಬಂಧಿಸಿದ ಈ ಕೆಳಕಂಡ ಘಟನೆಗಳನ್ನು ಪರಿಗಣಿಸಿ :

*(i)* ದಂಡಿ ಸತ್ಯಾಗ್ರಹ ಅಥವಾ ಉಪ್ಪಿನ ಸತ್ಯಾಗ್ರಹ

*(ii)* ಬೆಳಗಾಂನ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನ

*(iii)* ಭಾರತ ಬಿಟ್ಟು ತೊಲಗಿ ಚಳುವಳಿ

*(iv)* ಚೌರಿ-ಚೌರ ಘಟನೆ

ನೀಡಿರುವ ಮೇಲಿನ ಘಟನೆಗಳ ಕಾಲಾನುಕ್ರಮ ಸಂಕೇತಗಳನ್ನು ಸರಿಯಾದ ಉತ್ತರಕ್ಕಾಗಿ ಆಯ್ಕೆ ಮಾಡಿ :

(1) *(iv)–(iii)–(i)–(ii)*

(2) *(ii)–(iv)–(iii)–(i)*

(3) *(iv)–(ii)–(i)–(iii)*

(4) *(i)–(iii)–(iv)–(ii)*

97. ಕೆಳಗಿನ ಯಾವ ಎರಡು (ಜೋಡಿಗಳು) ಸರಿಯಾಗಿ ಹೊಂದಾಣಿಕೆ ಆಗುವುದಿಲ್ಲ?

| | ಸ್ವಾತಂತ್ರ್ಯ ಹೋರಾಟಗಾರರು | | ಗ್ರಂಥಗಳು/ ವೃತ್ತಪತ್ರಿಕೆಗಳು |
|---|---|---|---|
| *(i)* | ದಾದಾಬಾಯಿ ನವರೋಜಿ | – | ಪಾವರ್ಟಿ ಎಂಡ್ ಅನ್ ಬ್ರಿಟಿಷ್ ರೂಲ್ ಇಂಡಿಯಾ |
| *(ii)* | ಲಾಲಾ ಲಜಪತ್ ರಾಯ್ | – | ಹಿಂದೂ ಸ್ವರಾಜ್ |
| *(iii)* | ಬಾಲ ಗಂಗಾಧರ ತಿಲಕ್ | – | ಕೇಸರಿ |
| *(iv)* | ಜವಾಹರಲಾಲ್ ನೆಹರೂ | – | ಯಂಗ್ ಇಂಡಿಯಾ |

ನೀಡಿರುವ ಆಯ್ಕೆಗಳಲ್ಲಿ ಸರಿಯಾದ ಉತ್ತರಕ್ಕಾಗಿ ಸಂಕೇತಗಳನ್ನಾರಿಸಿ :

(1) *(i)* ಮತ್ತು *(ii)* ಮಾತ್ರ

(2) *(i)* ಮತ್ತು *(iii)* ಮಾತ್ರ

(3) *(ii)* ಮತ್ತು *(iv)* ಮಾತ್ರ

(4) *(ii)* ಮತ್ತು *(iii)* ಮಾತ್ರ

98. ಭಾರತ ಸರ್ಕಾರವು ರಾಷ್ಟ್ರೀಯ ವಾಯುಗುಣ ಬದಲಾವಣೆ ನೀತಿಯ ಅದರ ಭಾಗವಾಗಿ 2030ನೇ ವರ್ಷದಿಂದ ಈ ಸಾಮರ್ಥ್ಯದ ಸ್ಥಾಪಿತ, ನವೀಕರಿಸಬಹುದಾದ ಶಕ್ತಿಯನ್ನು ಹೆಚ್ಚಿಸುವುದಕ್ಕೆ ಉದ್ದೇಶಿಸಿದೆ.

(1) 175 GW

(2) 200 GW

(3) 250 GW

(4) 350 GW

99. ಕೆಳಗಿನ ಯಾವುದು ಭಾರತ ಸರ್ಕಾರದ ವಾಯುಗುಣ ಮಹಾಯೋಜನೆ ಅಡಿಯಲ್ಲಿ 8 ಮಿಷನ್‌ಗಳಲ್ಲಿ ಭರಿಸುವುದಿಲ್ಲ?

(1) ಸೌರ ವಿದ್ಯುತ್

(2) ಶಕ್ತಿ ಪರಿವರ್ತನಕ್ಕೆ ತ್ಯಾಜ್ಯ

(3) ಅರಣ್ಯೀಕರಣ

(4) ನ್ಯೂಕ್ಲಿಯರ್ ಶಕ್ತಿ

100. ಪಟ್ಟಿ-I ಮತ್ತು ಪಟ್ಟಿ-IIನ್ನು ಹೊಂದಿಸಿ ಮತ್ತು ಕೆಳಗೆ ನೀಡಲಾದ ಸಂಕೇತಗಳಿಂದ ಸರಿಯಾದ ಉತ್ತರವನ್ನು ಆರಿಸಿ :

| | ಪಟ್ಟಿ—I | | ಪಟ್ಟಿ—II |
|---|---|---|---|
| *(i)* | ಓಜೋನ್ ರಂಧ್ರ | *(a)* | ಸುನಾಮಿ |
| *(ii)* | ಹಸಿರುಮನೆ ಪರಿಣಾಮ | *(b)* | ಯುವಿ ಕಿರಣಗಳು |
| *(iii)* | ಸ್ವಾಭಾವಿಕ | *(c)* | ಮಿಥೇನ್ |
| *(iv)* | ಸುಸ್ಥಿರ ಅಭಿವೃದ್ಧಿ | *(d)* | ಪರಿಸರ-ಕೇಂದ್ರಿತ |

ಸಂಕೇತಗಳು :

| | *(i)* | *(ii)* | *(iii)* | *(iv)* |
|---|---|---|---|---|
| (1) | *(b)* | *(c)* | *(a)* | *(d)* |
| (2) | *(c)* | *(b)* | *(a)* | *(d)* |
| (3) | *(d)* | *(c)* | *(a)* | *(b)* |
| (4) | *(d)* | *(b)* | *(c)* | *(a)* |



Scanned with CamScanner